₹ 5/-

# ನೇಸರು

## ತಿಂಗಳೋಲೆ

PAGES 20

OCTOBER 2024 | Nesaru Tingalole | Vol. XLII - 10



## ತಾಯಿಯ ಹಬ್ಬ ನಾಡಿಗೆಲ್ಲಾ

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಅಸೋಸಿಯೇಷನ್ನಿನಲ್ಲಿ ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಮಹಾಗಣಪತಿ ಹಬ್ಬ



ಪ್ರತಿವರ್ಷದಂತೆ ಈ ವರ್ಷವೂ ಕೂಡ ಮೈಸೂರು ಅಸೋಸಿಯೇಷನ್ನಿನಲ್ಲಿ ಸ್ವರ್ಣಗೌರಿ ಮತ್ತು ವರಸಿದ್ಧಿ ವಿನಾಯಕರ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. ಸೆಪ್ಟೆಂಬರ್ 6, ಶುಕ್ರವಾರದಂದು ಮಹಿಳೆಯರೆಲ್ಲ ಸೇರಿ ಸ್ವರ್ಣಗೌರಿಯನ್ನು ಪ್ರತಿಷ್ಠಾಪಿಸಿ, ವಿಧ್ಯುಕ್ತವಾಗಿ ಪೂಜೆಯನ್ನು ಭಟ್ಟರ ಮಾರ್ಗದರ್ಶನದಲ್ಲಿ ನೆರವೇರಿಸಿ ಗೌರಿಗೆ ಆರತಿ ಮಾಡಿ ಅರಶಿನ ಕುಂಕುಮ ಬಾಗಿನ ಕೊಟ್ಟು ಸಂಭ್ರಮಿಸಿದರು.

ಮರುದಿನ ಸೆಪ್ಟೆಂಬರ್ 7, ಶನಿವಾರದಂದು ಶ್ರೀಯುತ ಫಾಲ್ಗುಣ ರುದ್ರಪಟ್ಟಣ ಮತ್ತು ದೀಪ್ತಿ ರುದ್ರಪಟ್ಟಣ ವರಸಿದ್ಧಿ ವಿನಾಯಕ ಸ್ವಾಮಿಯ ಪೂಜೆ ನೆರವೇರಿಸಿದರು. ಪೂಜೆಯ ನಂತರ ಗೌರಿ ಗಣೇಶರಿಗೆ ಆರತಿ ಮಾಡಿ ಪ್ರಸಾದ ವಿನಿಯೋಗ ಮಾಡಲಾಯಿತು.

ರವಿವಾರ ಸೆಪ್ಟೆಂಬರ್ 8ಕ್ಕೆ ಶ್ರೀಯುತ ರಾಧೇಶ್ ರಾಮಣ್ಣ ಮತ್ತು ಶ್ರೀಮತಿ ಶ್ಯಾಮಲಾ ರಾಧೇಶ್ ಅವರು ಗೌರಿ, ಗಣಪತಿ ಪೂಜೆಯನ್ನು ನೆರವೇರಿಸಿದರು. ವಿಸರ್ಜನೆ ಪೂರ್ವ ಪೂಜೆ,





ಸಹಸ್ರನಾಮ ಅರ್ಚನೆ, ಅಷ್ಟೋತ್ತರ, ದೇವರನಾಮ ಮತ್ತು ಭಜನೆ ಎಲ್ಲ ನಡೆದು ಮಹಾ ಮಂಗಳಾರತಿ ಪುಷ್ಪಾರ್ಚನೆಗಳಾದವು. ಕೊನೆಗೆ ಚೌಪಾಟಿಯಲ್ಲಿ ದೇವರನ್ನು ಕೊನೆಯ ಬಾರಿಗೆ ಪೂಜೆಸಿ, ಗೌರಿ ಗಣಪತಿಯನ್ನು ಕಳುಹಿಸಿಕೊಟ್ಟು ಭಾರವಾದ ಮನಸ್ಸಿನಿಂದ ಸದಸ್ಯರು ಹಿಂದಿರುಗಿದರು.





ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ಕೆ. ಕಮಲ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065
Email:
mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ

ಸಂಪುಟ - 42 ಅಕ್ಟೋಬರ್- 2024 ಸಂಚಿಕೆ-10

# ಸುಖ ದುಃಖಗಳೆರಡೂ ಒಂದೇ ನಾಣ್ಯದ ಎರಡು ಮುಖಗಳು

**✍ ಡಾ. ಜ್ಯೋತಿ ಸತೀಶ್**



ನಮ್ಮ ಬದುಕು ಲವಲವಿಕೆಯಿಂದ ಕೂಡಿರಬೇಕಾದರೆ, ಸ್ವಲ್ಪಮಟ್ಟಿನ ಯೋಗ, ಧ್ಯಾನ, ಪೂಜೆ ಪುನಸ್ಕಾರದಲ್ಲಿ ನಮ್ಮ ನಾವು ತೊಡಗಿಸಿಕೊಳ್ಳಬೇಕು. ಆಗ ನಮ್ಮ ಮನಸ್ಸು ಸದಾ ಪ್ರಪುಲ್ಲಿತವಾಗಿರುತ್ತದೆ. ಮೊನ್ನೆ ಮೊನ್ನೆಯಷ್ಟೇ ಗಣಪತಿ ಬಪ್ಪ ಬಂದು ನಮ್ಮೆಲ್ಲರ ತನುಮನಕ್ಕೆ ಉತ್ಸಾಹದ ಚಿಲುಮೆಯನ್ನು ಚಿಮ್ಮಿ ಹೋದ. ಗಣಪತಿ ಹೋದ ಬೆನ್ನಲ್ಲೆ ಇನ್ನು ತಾಯಿ ಶಾರದಾಂಬೆಯ ನವರಾತ್ರಿ ಹಬ್ಬದ ಮುಖೇನ ನಮ್ಮೆಲ್ಲರ ಬಾಳಿನಲ್ಲಿ ಪ್ರವೇಶವಾಗಲಿದ್ದಾಳೆ. ಭಗವಂತನ ಸಾನಿಧ್ಯದಲ್ಲಿ ದೇಹ ಬೇಡ ಬೇಡವೆಂದರೂ, ಮನಸ್ಸು ಒಂದು ರೀತಿಯ ಪ್ರಶಾಂತತೆಯನ್ನು ಪಡೆಯಲು ಬಯಸುತ್ತದೆ. ನಮಗೇ ಅರಿವಿಲ್ಲದಂತೆ ಮನಸ್ಸು ಧ್ಯಾನದತ್ತ ಕೇಂದ್ರಿಕರಣಗೊಳ್ಳುತ್ತದೆ.

ಈ ಹಬ್ಬ ಹರಿದಿನಗಳು ಮನಸ್ಸಿನಲ್ಲಿ ಎಷ್ಟೇ ನೋವು ತುಂಬಿದ್ದರೂ ಹೊಸ ಹರುಷವನ್ನು ತುಂಬುತ್ತವೆ ಎನ್ನುವುದಕ್ಕೆ ಎರಡು ಮಾತಿಲ್ಲ. ಈ ಸಂದರ್ಭದಲ್ಲಿ ಆ ಭಗವಂತನ ಸ್ಮರಣೆ, ಧ್ಯಾನ ಮಾಡುವುದರಿಂದ ಮನಸ್ಸಿಗೆ ಒಂದು ರೀತಿಯ ನಿರಾಳತೆ, ಸಂತೃಪ್ತಿ ಪ್ರಾಪ್ತಿಯಾಗುತ್ತದೆ. ಈ ಧ್ಯಾನ ಎಲ್ಲ ಅರವತ್ತು ದಾಟಿದ ಮೇಲೆ, ಈಗ ಏನಿದ್ದರೂ ಈ ಜೀವನವನ್ನು ಎಂಜಾಯ್ ಮಾಡಬೇಕು ಎಂದು ಬದುಕುವವರಿಗೆ ತಿಳಿಯ ಹೇಳಬೇಕು. ಜೀವನದಲ್ಲಿ ಎಲ್ಲವೂ ಬೇಕು. ಕಷ್ಟ ಸುಖ ಇವುಗಳೆರಡರ ಸಮ್ಮಿಶ್ರಣವಿದ್ದಾಗಲೇ ಆ ಜೀವನಕ್ಕೊಂದು ಪರಿಪೂರ್ಣತೆ ಪ್ರಾಪ್ತವಾಗುತ್ತದೆ.

ಒಮ್ಮೆ ಬೀರಬಲ್ಲನಿಗೆ ಅಕ್ಬರ್ ಕೇಳಿದನಂತೆ, ಪ್ರಪಂಚದಲ್ಲಿ ಇಂಥಹದ್ದು ಏನಾದರೂ ಇದೆಯೇ? ಯಾವ ಮಾತನ್ನು ಕೇಳಿ ಮನಸ್ಸಿಗೆ ಖುಷಿನೂ ಆಗುತ್ತೆ, ದುಃಖನೂ ಆಗುತ್ತೆ. ಅದಕ್ಕೆ ಬೀರಬಲ್ಲ ಹೇಳುತ್ತಾನಂತೆ, ಹೌದು ಇದೆ. ಅದಕ್ಕೆ ಅಕ್ಬರ್ ಹೇಳುತ್ತಾನೆ ಯಾವ ಮಾತದು ಅಂತ. ಅದಕ್ಕೆ ಬೀರಬಲ್ಲ ಹೇಳುತ್ತಾನೆ. 'ಈ ದಿನವೂ ಆದಷ್ಟು ಬೇಗ ಕಳೆದುಹೋಗುತ್ತದೆ'. ಈ ಮಾತನ್ನು ಯಾರಾದರೂ ತುಂಬ ಕಷ್ಟದಲ್ಲಿ ಇರುವವರಿಗೆ ಹೇಳಿದರೆ, ಅವರಿಗೆ ಮನಸ್ಸಿನಲ್ಲಿ ಸ್ವಲ್ಪ ಸಮಾಧಾನವಾಗಿ ಖುಷಿಕೊಡುತ್ತದೆ. ಅದೇ ತುಂಬಾ ಖುಷಿಯಲ್ಲಿ ಇರುವವರಿಗೆ ಈ ಮಾತನ್ನು ಹೇಳಿದರೆ, ದುಃಖವಾಗುತ್ತದೆ. ಅರೇ ಯಾರ್ ಈ ದಿನ ಬಹುಬೇಗ ಮುಗಿದುಹೋಗುತ್ತದಾ ಎನ್ನುವ ದುಃಖ ಅವರನ್ನು ಕಾಡುತ್ತದೆ. ಅಂದರೆ ಜೀವನದಲ್ಲಿ ಯಾವುದೂ ಶಾಶ್ವತವಲ್ಲ. ಕಾಲಚಕ್ರ ತಿರುಗಿದ ಹಾಗೆ, ಸುಖ ದುಃಖಗಳೆರಡೂ ನಮ್ಮ ಜೀವನದಲ್ಲಿ ಪ್ರವೇಶವಾಗುತ್ತದೆ. ಅದನ್ನು ಅರಿತು, ಜೀವನವನ್ನು ನಡೆಸಬೇಕು. ಸುಖ ದುಃಖಗಳೆರಡೂ ಒಂದೇ ನಾಣ್ಯದ ಎರಡು ಮುಖಗಳು. ಖುಷಿ ಬಂದಾಗ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ ಎರಡರ ಜೊತೆನೂ ತಾಳಮೇಳದೊಂದಿಗೆ ಬದುಕಬೇಕು.

ಬದುಕುವುದಕ್ಕೆ ಪ್ರೇರಣೆ ಬಾಳೇ. ಅದು ಅಸಂಖ್ಯ ಅವಕಾಶಗಳಿಂದ, ಅನಿರೀಕ್ಷಿತ ಘಟನೆಗಳಿಂದ ತುಂಬಿದ್ದು, ಆಸಕ್ತಿವಹಿಸದವನಿಗೆ ಅದರಲ್ಲಿ ಉತ್ಸಾಹವಿಲ್ಲ. ಪ್ರತಿಯಾಗಿ ವಿಘ್ನ, ದುಃಖ, ಸಂಕಟಗಳೇ ಕಾಣಿಸಿಯಾವು. ಹೀಗಾಗಿ ನಾವು ಮಾಡುವ ಯಾವುದೇ ಕೆಲಸವಿರಲಿ ಅದನ್ನು ಆಸಕ್ತಿಯಿಂದ ಆಸಕ್ತಿಯಿದ್ದೇ ಮಾಡಬೇಕು; ಉತ್ಸಾಹವಿದ್ದೇ ಮಾಡಬೇಕು. ಈ ಸಂದರ್ಭದಲ್ಲಿ ಪುರಂದರ ದಾಸರು ಹೇಳಿದ 'ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಲಿಬೇಡ ಹುಚ್ಚಪ್ಪಗಳಿರಾ' ಎಂಬ ಮಾತನ್ನು ಈ ಸಂದರ್ಭದಲ್ಲಿ ಗಮನಿಸಬಹುದು. ಬೆಳಗಾದ ತಕ್ಷಣ ಮೊದಲು ಆ ದೇವರನ್ನು ಸ್ಮರಿಸಬೇಕು. ಈ ಶುಭದಿನವನ್ನು ನನ್ನ ಈ ಜೋಳಿಗೆಯಲ್ಲಿ ಹಾಕಿದ್ದಕ್ಕೆ ನಿನಗೆ ನನ್ನ ಕೃತಜ್ಞತೆಗಳು. ಪ್ರತಿದಿನವೂ ನಮ್ಮ ಬದುಕಿಗೆ ಹೊಸ ದಿನವೇ. ನಾವು ಮಾಡುವ ಕೆಲಸ ಪ್ರತಿಯೊಬ್ಬರಿಗೂ ಪ್ರೇರಣೆದಾಯಕವಾಗಿರಬೇಕು.

# ನಮ್ಮ ವಾರಾಣಸಿ – ಅಯೋಧ್ಯಾ ಪಯಣ

ಮೊದಲು ಗುಯ್‌ಗುಟ್ಟುವುದಕ್ಕೆ ಶುರು ಮಾಡಿದವಳು ರೇಷ್ಮಾ. ನಾವು ಎಲ್ಲರೂ ಅಯೋಧ್ಯಾಗೆ ಹೋಗಿ ಬರಲೇಬೇಕು, ನಾವು ಎಲ್ಲಿಯೂ ಹೋಗೇ ಇಲ್ಲ. ಆಮೇಲೆ ಅದಕ್ಕೆ ದನಿಗೂಡಿಸಿದವಳು ಪದ್ಮಾ ಹೌದಪ್ಪಾ ನಾವೆಲ್ಲಾ ಹೋಗಲೇಬೇಕು ಯಾರ್ಯಾರು ಬರ್ತರಾ ? ಗೊತ್ತಿಲ್ಲ, ಎಲ್ಲಿಯಾದರು ಪಿಕ್‌ನಿಕ್ ಅಂದ ಕೂಡಲೆ,




ಗಂಟು ಮೂಟೆ ಕಟ್ಟಿ ನಿಲ್ಲುವವರು ಯಾರು ಅಂತ ? ಜೋಶಿ ಸಾಹೇಬ್ರು ಎಲ್ಲಿಯಾದರೂ ಹೋಗಿ, ನಾವು ಬರಲ್ಲ ಅಂದವರು ಎಂದಿನಂತೆ ಈ ಡಾಕ್ಟ್ರು. ಇರಲಿ ನಾವು ಒಬ್ಬ ಟ್ರಾವೆಲ್/ಟೂರ್ ಏಜೆಂಟ್‌ನ ಕರೆಯೋಣ. ಸರಿ

ಜೋಶಿ ಸಾಹೇಬ್ರು ಕೆಲವರನ್ನ ಹಿಡಿದರು. ಆಮೇಲೆ ಅವರ ಜೊತೆ ಮಾತು ಕತೆ ನಡೆಯಿತು. ಅದರಲ್ಲಿ ಪದ್ಮಾಳದೇ ಉಸ್ತುವಾರಿ. ನಾವು ವಾರಣಾಸಿ ಚಿತ್ರಕೂಟಕ್ಕೆ ಹೋಗಲೇಬೇಕು, ಅಲ್ಲಿ ಅದಿದೆ, ಇಲ್ಲಿ



ಇದಿದೆ, ಇದರ ಜೊತೆಗೆ ಕಡೆ ನಿಮಿಷದಲ್ಲಿ ಜೊತೆಗೂಡಿ ದನಿ ಎತ್ತಿದವಳು ಶ್ಯಾಮಲ. “ಅಯ್ಯೋ ವಾರಣಾಸೀಲಿ, ಬನಾರಸ್ ಸಿಲ್ಕು ಚೀಪಾಗಿ ಸಿಗುತ್ತೆ, ನಾವೆಲ್ರೂ ಶಾಪಿಂಗ್ ಹೋಗೋಣ ಅಂತ ಶುರು ಮಾಡ್ಕೊಂಡ್ಳು. ನಾವೆಲ್ರೂ ಆಗಸ್ಟ ತಿಂಗಳಲ್ಲೇ ಹೋಗಿ ಬರೋಣ ಅಂತ ಎಲ್ಲರದ್ದೂ ರಂಪಾಟ. ಗೊತ್ತಿಲ್ಲಾ ಈ ಡಾಕ್ಟರು, ಎಂತಹದು ಬೇಡ ಆ ದಿನಗಳಲ್ಲಿ ಉತ್ತರ ಪ್ರದೇಶದಲ್ಲಿ ಮಳೆ ಹಾವಳಿ, ನಾವು ಸೆಪ್ಟೆಂಬರ್‌ನಲ್ಲಿ ಹೋಗೋಣ. ಗಣಪತಿ, ನವಿಲೇಕರ್ “ನಮ್ಮ AGM ಬರುತ್ತೆ, ಅದಕ್ಕಿಂತ ಮೊದಲೇ ಹೋಗಿ ಬರಬೇಕು ” ಅಂತ. ಸರಿ ಹೀಗೊ ಹಾಗೋ ಎಳೆದಾಡಿ, ಗಣಪತಿ ವಿಸರ್ಜನೆ ಆದ ಮಾರನೆಯ ದಿನವೇ ಹೊರಡುವುದು ಎಂದು ತೀರ್ಮಾನವಾಯಿತು. ಸರಿ, ಭಾಗ್ಯಶ್ರೀ ಟೂರ್ಸ್ ಕೂಡ ಮಾತುಕತೆಯಾಗಿ ಎಲ್ಲವೂ ಅಣಿಯಾಯಿತು. ರೇಲ್ವೆ ಟಿಕೆಟ್ ಎಲ್ಲರೂ ಬುಕ್ ಮಾಡಬೇಕು ಅಂತ ಹೇಳಿ 9 ನೆಯ ಸೆಪ್ಟೆಂಬರ್ ರಾತ್ರಿ 12 ಘಂಟೆಗೆ ಮುಂಬಯಿ ಬಿಡುವುದು ಎಂದು ಆಯಿತು. ಪದ್ಮಾ, ರವಿ , ನಾವು ಥಾಣಾದಿಂದ ರೈಲು ಹಿಡಿತೀವಿ ಅಂದರೆ, ಮಂಜು ನಾವು ಕಲ್ಯಾಣನಿಂದ ಹಿಡಿತೀವಿ ಅಂದ. ಅದಕ್ಕೆ ಸೇರಿಗೆ ಸವ್ವಾ ಸೇರಾಗಿ ಈ ಡಾಕ್ಟ್ರು – ತರಲೆ ” ನಾವು ಬೆಂಗಳೂರಿನಿಂದ 11 ರ ಬೆಳಿಗ್ಗೆ ಬರ್ತೀವಿ ಅಂದ್ರು. ಸರಿ ಅವರಿಗೇನು ಹೇಳೋದು ಬರ್ತೀನಿ ಅಂದ್ರುಲ್ಲ ಅಷ್ಟೇ ಸಾಕು ಅಂದ್ಳು ರೇಷ್ಮಾ.

ಸರಿ ಹೊರಟಾಯಿತು, ದಾರೀಲಿ ಬೆಳಿಗ್ಗೇಗೆ ಏನು ತಿಂಡಿ ? ರಂಜಿತ್‌ಹತ್ತಿರ ಪುಳಿಯೊಗರೆಯೋ, ಉಪ್ಪಿಟ್ಟೋ ಮಾಡಿಸ್ಕೊಂಡು ಹೋಗೋಣ. ಅಯ್ಯೋ ಬೇಡಪ್ಪ , ನಾವು ಬ್ರೆಡ್, ಟೊಮ್ಯಾಟೋ, ಸೌತೆಕಾಯಿ ತಗೊಂಡು ಟ್ರೈನ್‌ನಲ್ಲೇ “ಮರಳು ಮಾಟಗಾತಿ” ಮಾಡ್ಕೊಳೋಣ ಅಂದ್ಲು ಶ್ಯಾಮಲ. ಆದರೆ ಅದನೆಲ್ಲಾ ಹೆಚ್ಚಿ ಕತ್ತರಿಸೋವ್ರು ? ರೇಷ್ಮಾ, ಏಯ್ ನೀವು ಸುಮ್ಮನಿರಿ, ನಾನು ಕೆಲಸದವರನ್ನ ಕರ್ಕೊಂಡು ಬರ್ತೀನಿ” ಅಂದಿದ್ರಿಂದ ಎಲ್ಲರೂ ಸುಮ್ಮನಾದರು.

9 ನೆಯ ತಾರೀಖು ರಾತ್ರಿ ವಿ.ಟಿ.ಯಲ್ಲಿ ಟ್ರೈನ್ ಬರ ಬರ ಹತ್ತಿ ಕಿರಚಾಡುತ್ತಿರುವಾಗ ಟಿಕೆಟ್ ಕಲೆಕ್ಟರ್ ಬಂದು, “ತಾಯಿ ನೀವು ಸ್ವಲ್ಪ ಕಿರುಚಾಡುವುದನ್ನು ಕಡಿಮೆ ಮಾಡಿ ” ಅಂತ ಹೇಳಿ ಹೋದ. ಈ ಟ್ರೈನ್‌ನಲ್ಲಿ ಮಾತಾಡೋಕು ಸ್ವಾತಂತ್ರ್ಯ ಇಲ್ಲ ಅಂತ ಭವಾನಿ ಗೊಣಗಾಡಿದಳು. ಅಂತೂ ಥಾಣಾದಲ್ಲಿ ಪದ್ಮ – ರವಿ, ಕಲ್ಯಾಣದಲ್ಲಿ ಮಂಜು - ಸೀತಾ, ವಿಶಾಲಾ, ನಮಿತಾ, ಅನ್ವಿ ಎಲ್ಲರನ್ನೂ ಹತ್ತಿಸಿ ಕೂರಿಸಿಕೊಂಡು ಹೊರಡ್ತು ಸವಾರಿ. ಹೇಗೋ ರಾತ್ರಿ ಕಳೆಯಿತು. ಬೆಳಿಗ್ಗೆ ಎದ್ದು, ಎಲ್ಲರಿಗೂ ಕಾಫಿ ಕೊಡಿಸಿಯಾಯಿತು. ಆಮೇಲೆ ರೇಷ್ಮಾ

ಬ್ರೆಡ್, ಟೊಮ್ಯಾಟೋ, ಸೌತೆಕಾಯಿ, ಚಾಕು, ಮಣೆ ಎಲ್ಲಾ ತಂದು ಗಣಪತಿ , ನವಿಲೇಕರ್ ಮುಂದೆ ಕುಕ್ಕಿ "ಸರಿಯಾಗಿ ಹೆಚ್ಚಿ, ಮರಳು ಮಾಟಗಾತಿ ಮಾಡಿ, ಕೆಟ್ಟ ಕೆಟ್ಟದಾಗಿ ಕತ್ತರಿಸಬೇಡಿ" ಎಂದು ಒದರಿ ತನ್ನ ಜಾಗಕ್ಕೆ ಹೋದಳು. ಅಲ್ಲಿ ರೇಷ್ಮಾ, ಪದ್ಮಾ, ಶ್ಯಾಮಲ, ಸರಿತಾ, ವೀಣಾ, ಸೀತಾ, ಭವಾನಿ, ವಿಜಯಾ ಜೋಕ್ಸೋ, ಜೋಕ್ಸು! ಇಲ್ಲಿ ಈ ಕಾರ್ಮಿಕ ವೃಂದ ಏನೂ ತೋಚದೆ, ಟೊಮ್ಯಾಟೊ, ಸೌತೆಕಾಯಿ ಕತ್ತರಿಸಿದ್ದೇ ಕತ್ತರಿಸಿದ್ದು. ಆಮೇಲೆ ಕೆಳಗೆ ಬಿದ್ದಿದ್ದನೆಲ್ಲಾ ಒರೆಸಿ ತಿಕ್ಕಿ ಪಕ್ಕಕ್ಕೆ ಹೋಗಿ" ಬನ್ನಿ ಎಲ್ಲಾ ರೆಡಿಯಾಗಿದೆ ಮುಕ್ಕುವರಂತೆ" ಎಂದು ಗಣಪತಿ ಕೂಗಿದ ಮೇಲೆ ಸರ-ಸರ ಬಂದು "ಅಯ್ಯೋ ಸ್ವಲ್ಪ ಉಪ್ಪು ಸವರಿದ್ದರೆ ಎಷ್ಟು ಚೆನ್ನಾಗಿರ್ತಿತ್ತು ಎಂದು ಗೊಣಗುತ್ತಾ ತಿಂದು ಬಾಯಿ ಒರೆಸಿಕೊಂಡಿದ್ದಾಯ್ತು. ಹೀಗೆ ವಾರಣಾಸಿ ತಲುಪುವ ತನಕ ಈ ಲೇಬರರ್ಸ್ ಕೈಲಿ ಕೂಲಿ ಮಾಡಿಸಿದ್ದಾಯ್ತು. ಸೆಪ್ಟೆಂಬರ್ 11 ರ ಬೆಳಿಗ್ಗೆ 3 ಘಂಟೆಗೆ ವಾರಣಾಸಿ ತಲುಪಿದ್ದಾಯ್ತು. ರೈಲು ಇಳಿದಿದ್ದೇ




ಸರಿ, ಪದ್ಮಾ, 'ಎಲ್ಲಿ ನಮ್ಮನ್ನ ರಸೀವ್ ಮಾಡೋಕೆ ಯಾರು ಬಂದಿಲ್ಲ'





ಅನ್ನೋವಷ್ಟರಲ್ಲಿ ಭಾಗ್ಯಲಕ್ಷ್ಮೀ, ಅಜಯ್ ಕುಲಕರ್ಣಿ ಮತ್ತು ಅಜಿಂಕ್ಯ ಓಡೋಡಿ ಬಂದು, ಸಾಮಾನೆಲ್ಲಾ ಇಳಿಸಿ, ಬಸ್‌ನಲ್ಲಿ ಜಾಹ್ನವಿ ಹೋಟೆಲ್‌ಗೆ ಎಲ್ಲರನ್ನು ಸಾಗಿಸಿದರು. ಆದರೆ ಅಲ್ಲಿ ಹೋದರೆ ಈಗ ನಾಲ್ಕೇ ರೂಮ್ ಸಿಗುತ್ತೆ, 12 ಘಂಟೆಯ ಮೇಲೆ ಎಲ್ಲರಿಗೂ ರೂಮ್ ಸಿಗುತ್ತೆ ಅಂತ ಕೇಳಿ ಬೇಸರವಾಯಿತು. ಈ ಅನ್ವಿ ತನ್ನ ಬೇಸರವನ್ನು ಅವಳ ಅಮ್ಮನ ಮೇಲೆ ಅತ್ತು ತೀರಿಸಿಕೊಂಡಳು. ಇನ್ನೇನು ಮಾಡೋಕಾಗುತ್ತೆ ಲೇಬರ್ ಡಿಪಾರ್ಟ್‌ಮೆಂಟ್‌ನ ವಿಶಾಲ್ ಅವಳನ್ನು ಎತ್ತಿಕೊಂಡು ಸುಧಾರಿಸಿದ.



ಎಲ್ಲರೂ ಸ್ವಲ್ಪ ಸುಧಾರಿಸಿಕೊಂಡ ಮೇಲೆ ಮೊದಲನೆ ಮಹಡಿಯಲ್ಲಿ ತಿಂಡಿ ಚೆನ್ನಾಗಿತ್ತು ಅಂತ ಶ್ಯಾಮಲಿಯೇ ಸರ್ಟಿಫಿಕೆಟ್ ಕೊಟ್ಟ ಮೇಲೆ ಇನ್ನೇನು ಬೇಕು. ಸುಮಾರು 12.30 ಗೆ ಈ ಡಾಕ್ಟ್ರು – ಥಯ್ಯಾ ಮಾಮನ ಸವಾರಿ ಬಂದು ಇಳಿಯಿತು. "ಎಲ್ಲರೂ ಊಟ ಆದ ಮೇಲೆ ಗಂಗಾ ನದಿ ತೀರಕ್ಕೆ ಹೋಗುವುದು ಎಂದು ಹೇಳಾಯಿತು. 4 ಘಂಟೆಗೆ ಎಲ್ಲರೂ ಎರಡು ಬಸ್ಸುಗಳಲ್ಲಿ ಕೂತು ಗಂಗಾ ತಟಕ್ಕೆ ಹೋಗಿ, ಅಲ್ಲಿ ಸ್ವಲ್ಪ


ತಟದಲ್ಲಿಯೇ ಕೂತು ದುರ್ಗಾ ಮಾತಾ ಮಂದಿರಕ್ಕೆ ಬಂದೆವು, ಅಲ್ಲಿಂದ ಸಂಕಟ ಮೋಚನ ಹನುಮಾನ್



ಮಂದಿರಕ್ಕೆ ಹೋಗಿ ದರ್ಶನ ಮಾಡಿ, ಅಲ್ಲಿಂದ ಆಮೇಲೆ ದೊಡ್ಡ ನಾವಿಗೆ ಹತ್ತಿದೆವು. ಮೊದಲು ಒಂದು ವಿಡಿಯೋ ಹಾಕಿ ತೋರಿಸಿದರು. ಆಮೇಲೆ ನಮ್ಮಲ್ಲಿದ್ದ ಮಂಗಗಳೆಲ್ಲಾ ಮೇಲಿನ ಅಟ್ಟಕ್ಕೆ ಏರಿ, ಅಲ್ಲಿ ಕುಣಿದಾಡಲು ಶುರು ಮಾಡಿದರು. ಅವರ ಹೆಜ್ಜೆಯ ಗುದ್ದು ಕೆಳಗೆ ಕೂತ ನಮ್ಮ ತಲೆಯ ಮೇಲೆ ಗುದ್ದಿದ ಹಾಗಿತ್ತು. ಆದರೇನು  ಎಲ್ಲರು ಕುಣಿದು ಕುಪ್ಪಳಿಸಿದ ಮೇಲೆ, ಗಂಗಾ ಆರತಿಯನ್ನು  ನೋಡುತ್ತಾ ಮುಂದುವರೆದೆವು. ಆ ಆರತಿಯೇನೊ ಹೇಳಿಕೊಳ್ಳುವಂತಿರಲಿಲ್ಲ. ಗಂಗೆಯಲ್ಲಿ ನೀರು 4 ಅಡಿಗಳಷ್ಟು ಏರಿ, ಘಾಟಿನ ಮೆಟ್ಟಿಲುಗಳೆಲ್ಲಾ ನೀರಿನಲ್ಲಿ ಮುಳುಗಿದ್ದರಿಂದ  ಯಾರೂ ಅಲ್ಲಿ ನಿಂತು ಆರತಿ ಮಾಡುತ್ತಿರಲಿಲ್ಲ, ಆದರೆ ಎಲ್ಲರಿಗೂ ಏನೋ ಒಂದು ಸಮಾಧಾನ.




ಹೋಟೆಲ್‌ಗೆ ಹಿಂತಿರುಗಿ, ಊಟ ಮಾಡಿ ಮಲಗಿ ಎಲ್ಲರೂ ಬೆಳಿಗ್ಗೆ 2.30 ಘಂಟೆಗೆ ಎದ್ದು ಕಾಶಿ  ವಿಶ್ವನಾಥನನ್ನು ನೋಡಲು ಹೋದೆವು. ಅಲ್ಲಿ ತುಂಬಾ ಚೆಕಿಂಗ್. ಎಲ್ಲರ ರಾತ್ರಿ ಊಟ ಆಯಿತು. ರೇಷ್ಮಾ ಶುರು ಮಾಡ್ಕೊಂಡ್ಲು... ನಾವೀಗ ಶಾಪಿಂಗ್‌ಹೋಗಿ ಬರೋಣ್ವಾ ಇನ್ನು ಟೈಮ್ ಇದೆ ಅಂತ. ಎಲ್ಲರೂ ಈಗ ಬೇಡಿ , ನಾಳೆ ಹೋಗೋಣವಂತೆ ಅಂತ ಹೇಳಿದ್ಮೇಲೆ ಮುಖ ಗಂಟು ಹಾಕಿಕೊಂಡು ರೂಮಿಗೆ ಹೋದ್ಲು.



ಬೆಳಿಗ್ಗೆ ಎಲ್ಲರೂ 4 ಘಂಟೆಗೆ ಎದ್ದು, ತಯಾರಾದ್ರು. ಎಲ್ಲರಿಗೂ ಮುಂಚೆನೇ ಹೇಳಿದ್ರು ನಿಮ್ಮ ಆಧಾರ ಕಾರ್ಡ್ ಇಟ್ಕೊಳ್ಳಿ. ತೋರಿಸ್ಬೇಕು ಆಮೇಲೆ ನಿಮ್ಮ ಮೊಬೈಲ್ ಒಳಗೆ ಬಿಡೊಲ್ಲ ಅಂತ . ಸರಿ ಎಲ್ಲರೂ ಬಸ್ ಹತ್ತಿಕೊಂಡು, ಕಾಶೀ ವಿಶ್ವನಾಥನನ್ನು ನೋಡೋದಕ್ಕೆ ಅಂತ ಸಡಗರವಾಗಿ ಹೊರಟ್ರು. ಅಲ್ಲಿ ಇಳಿದ ಮೇಲೆ ಒಂದು ದೊಡ್ಡ ಸಾಲು. ನಮ್ಮ ಚಪ್ಪಲಿ, ಮೊಬೈಲ್‌ಗಳನ್ನು ಆ ಅಂಗಡಿಯಲ್ಲೇ ಇಟ್ಟು ಸಾಲಿನಲ್ಲಿ ನಿಂತು ಸಾಗಿತು. ಕಡೆಗೆ ಒಂದು ಕೌಂಟರ್‌ನಲ್ಲಿ ನಿಂತು, ನಮ್ಮ 22 ಮಂದಿಗೆ ಒಂದೊಂದು ಟಿಕೆಟ್‌ಕೊಡಿಸಿದ್ರು. ಅಲ್ಲಿಂದ  ಮುಂದಕ್ಕೆ 4ನೆ ಗೇಟ್‌ಗೆ ಹೋದೇವು. ಅಲ್ಲಿಂದ ಪಾರಾಗಿ, ಎಲ್ಲಾ ಪೋಲಿಸ್ ಪಡೆಯನ್ನೂ ದಾಟಿ, ಒಳಗೆ ಬಂದೆವು. ಅಯ್ಯಯ್ಯೋ ಎಲ್ಲಾ ನೂಕೂ ನುಗ್ಗಲು, ಅಲ್ಲಿ ಇನ್ನೆರಡು ಸಾಲುಗಳಲ್ಲಿ ನಿಂತೆವು . ಕಾಶೀ ವಿಶ್ವೇಶ್ವರನ ಸ್ಪರ್ಶ ದರ್ಶನ ಕೇವಲ ತುಸು ಕಾಲ ಮಾತ್ರ. ಥಯ್ಯಾ ಮಾಮನ್ನ ಬಿಟ್ರು, ಡಾಕ್ಟರ್ ಮಾಮನ್ನ ಪೋಲಿಸರು ಹಿಡಿದು ನಿಲ್ಲಿಸಿದ್ರು. ಥಯ್ಯಾ  ಮಾಮ ಇಲ್ಲ ಅವನನ್ನ ಬಿಡಿ  ನಾನು ಆಮೇಲೆ ಹೋಗಿ ದರ್ಶನ ಮಾಡ್ತೀನಿ ಗಿಂಜಾಡಿದ ಮೇಲೆ ಡಾಕ್ಟರ್ ಮಾಮನ್ನ ಬಿಟ್ಟ್ರು. ಅಲ್ಲಿ ಹೋದವರು ನೋಡಿದ್ರೆ, ಕಾಶೀ ವಿಶ್ವೇಶ್ವರ ಒಂದು ಗುಂಡಿಯೊಳಗೆ ಅಡಗಿ ಕೂತಿದ್ದಾನೆ!!! ಅವನನ್ನು ಸ್ಪರ್ಶಮಾಡುವುದು ಸುಲಭವೇ? ಮಂಡಿ ಬಗ್ಗಿಸಿ, ಸೊಂಟ ಬಗ್ಗಿಸಿ, ಕೈ ಒಳಗೆ ಮಾಡಿದರೆ ಮಾತ್ರ ಅವನನ್ನು ನಾವು ಮುಟ್ಟಬಹುದು. ಅವನನ್ನು ದರ್ಶನ  ಮಾಡಿ  ಇನ್ನೊಂದು ಬಾಗಿಲಿನಿಂದ  ನಾವು ಬರುತ್ತೇವೆ, ಅಲ್ಲಿ ಶ್ಯಾಮಲ ಸಾಲಿನಲ್ಲಿ ನಿಂತು ಜೋರಾಗಿ ಅಳುತ್ತಿದ್ದಾಳೆ. “ನಾನು ಇಲ್ಲಿಗೆ ಬಂದಿದ್ದೆಲ್ಲಾ ವ್ಯರ್ಥ, ವಿಶ್ವನಾಥನ ದರ್ಶನ ಮಾಡೋಕೆ ಬಿಡದೆ ನನ್ನ ಇವರು ತಡೆಯುತ್ತಿದ್ದಾರೆ" ಅಂತ.

ಚೆನ್ನಾಗಿ ಧಾರಾಕಾರವಾಗಿ ಅವಳ ಕಣ್ಣಲ್ಲಿ ನೀರು, ಅದನ್ನ ನೋಡಲಾರದೆ, ಆ ಪೋಲಿಸ್ ಅವಳನ್ನ ಬಿಟ್ಟು ಒಳ ಹೋಗುವುದಕ್ಕೆ ಅನುವು ಮಾಡಿ ಕೊಟ್ಟಿದ್ದಲ್ಲದೆ ಅವಳಿಗೆ ಸೆಲ್ಯೂಟ್ ಮಾಡಿದ. ಅಂತೂ ಎಲ್ಲರೂ ಹೊರಗೆ ಬಂದೆವು. ಅನ್ನಪೂರ್ಣೇಶ್ವರಿ ತಾಯಿಯನ್ನು ನೋಡಿ ಕಣ್ಣುಗಳು ಧನ್ಯವಾದವು. ಅಲ್ಲಿಂದ ಆ ನಿಷ್ಠ ನಂದಿಯನ್ನು ನೋಡಲು ಬಂದೆವು. ಆ ನಂದಿ, 350 ವರ್ಷಗಳ ಕಾಲ ಆ ವಿಶ್ವೇಶ್ವರನ ಕಡೆಯೇ ನಿಂತು ನೋಡುತ್ತಿದೆ. ಎದುರಿಗೆ ಆ ಮಸೀದಿ. ಎಲ್ಲಾ ಕಡೆಯಿಂದ ಅದಕ್ಕೆ ಯಾರು ಹೋಗದಂತೆ ಕಬ್ಬಿಣದ ಬೇಲಿಗಳನ್ನು ಹಾಕಿದ್ದಾರೆ. ಅಲ್ಲಿಂದ ಸುತ್ತು ಹಾಕಿದ ಮೇಲೆ ಒಳಗೆ, ಮಸೀದಿಯ ಕೆಳಗೆ ಶೃಂಗಾರ ಗೌರಿಗೆ ಯಾರೋ ಪಂಡಿತರು ಪೂಜೆ ಮಾಡುತ್ತಿದ್ದಾರೆ. ನಮ್ಮನ್ನು ಯಾರನ್ನೂ ಬಿಡುವುದಿಲ್ಲ. ಕೋರ್ಟ್ ಕೇಸ್ ನಡೆಯುತ್ತಿರುವುದರರಿಂದ ಭದ್ರ ಕಾವಲು. ಆ ವಿಶ್ವನಾಥನ ಮಂದಿರದಲ್ಲಿ ಬಿಲ್ವ ಪತ್ರೆಯ ಮರ ನೋಡುವುದೆ ಒಂದು ಸೊಗಸು. ವಿಶ್ವನಾಥನ ಮಂದಿರವನ್ನು ಚೆನ್ನಾಗಿ ಕಾಪಾಡಿಕೊಂಡು ಬಂದಿದ್ದಾರೆ.

ಈ ಮಧ್ಯೆ ಪದ್ಮ, ನಾನು ಕಾಲಭೈರವನ ದರ್ಶನ ಮಾಡದೆ ವಿಶ್ವೇಶ್ವರನ ದರ್ಶನ ಮಾಡುವುದಿಲ್ಲ ಎಂದು ಹಟ ಹಿಡಿದಿದ್ದರಿಂದ, ನಾವು ಅವಳನ್ನು ಕಾಯಬೇಕಾಯಿತು. ಎಲ್ಲರೂ ದರ್ಶನ ಮಾಡಿದ ಮೇಲೆ ಮತ್ತೆ ಹೊರಗೆ ಬಂದು, ನಮ್ಮ ನಮ್ಮ ಮೊಬೈಲಗಳು, ಚಪ್ಪಲಿಗಳನ್ನು ಪಡೆದು ಹೋಟೆಲ್‌ಗೆ ಹಿಂತಿರುಗಿದೆವು. ನಮಗೆ ಅಡಿಗೆ ಮಾಡುತ್ತಿದ್ದವರು ರಾಜಸ್ಥಾನದವರು, ಆದರೂ ಅವರು ನಮ್ಮನ್ನ ನೋಡಿಕೊಳ್ಳುವ ರೀತಿ, ಅಡುಗೆ ಎಲ್ಲವೂ ಹಿತವಾಗಿದ್ದವು., ಈ ಡಾಕ್ಟರ್ ಮಾಮಂದೇ ಒಂದು ರೀತಿ. ಅದು ಸರಿಯಿಲ್ಲ, ಇದು ಹೀಗಿದೆ, ಅದು ಹಾಗಿದೆ ಅಂತ.




ಬೆಳಿಗ್ಗೆ ತಿಂಡಿ ಮುಕ್ಕಿ ಮತ್ತೆ ಹೊರಟೆವು. ಮೊದಲು ಸಂದಿಗೊಂದಿ ಎಲ್ಲಾ ಸುತ್ತಿಕೊಂಡು ಕವಡಿ ಮಾತಾ ಮಂದಿರಕ್ಕೆ ಬಂದಾಗ , ಅದರ ಬಾಗಿಲು ಮುಚ್ಚಿತ್ತು. ಆಮೇಲೆ ನಾವು ಸಂಕಟ ಮೋಚನ ಹನುಮಾನನ್ನು ದರ್ಶನ ಮಾಡಿದೆವು. ಆ ಮಹಾನುಭಾವ ಅಷ್ಟೆತ್ತರ ನಿಂತಿದ್ದಾನೆ. ನೋಡುವುದೇ ಒಂದು ಚೆಂದ.

ಬಳಿಕ ನಾವು ಸಾರನಾಥ್ ಬೌದ್ದ ವಿಹಾರಕ್ಕೆ ಬಂದೆವು. ಅಲ್ಲಿ ಒಳಗೆ ಅಷ್ಟೆತ್ತರದಲ್ಲಿ ಒಂದು ಸಂಗ್ರಹಾಲಯ ಮಾಡಿದ್ದಾರೆ. ದೊಡ್ಡ ತೋಟ, ಆಮೇಲೆ ದೊಡ್ಡ ಸ್ತೂಪ. ಗೊತ್ತಿದೆಯಲ್ಲ ಹೆಣ್ಣು ಮಕ್ಕಳೆಲ್ಲಾ ಫೋಟೋ ತೆಗೆದಿದ್ದೇ ತೆಗೆದಿದ್ದು. "ಇದರಲ್ಲಿ ನಾನೂ ಚೆನ್ನಾಗಿ ಬಂದಿಲ್ಲ ಈ ಕಡೆಯಿಂದ ಬೇರೆ ಒಂದು ತೆಗಿ" ಅಂತ.




ಇಷ್ಟೆಲ್ಲಾ ಆಗೋ ಹೊತ್ತಿಗೆ 4 ಘಂಟೆ "ಅಯ್ಯೋ ನಾವು ಶಾಪಿಂಗ್ ಹೋಗೊ ಟೈಮ್ ಆಯಿತು". ತಿರುಗಿ ಬಸ್‌ನಲ್ಲೇ ತುರುಕಿಕೊಂಡು ಆ ಭಾಗ್ಯಶ್ರೀ ಟೂರ್‌ನವರು, "ಇಲ್ಲೇ ಬನಾರಸ್ ಸಿಲ್ಕ್ ಫ್ಯಾಕ್ಟರಿ ಇದೆ, ಇಲ್ಲಿ ಚೀಪಾಗಿ ಸಿಗುತ್ತೇಂತ ಕರ್ಕೊಂಡು ಹೋದ . ನಾವೆಲ್ಲಾ ಗಂಡು ಮಕ್ಕಳು ಹೊರಗೆ ಕಾದಿದ್ದೇ ಕಾದಿದ್ದು. ಒಳಗೆ ಈ ಹೆಣ್ಣುಮಕ್ಕಳು "ಇದು ತೆಗೆದು ತೋರಿಸು, ಅದು ತೆಗೆದು ತೋರಿಸು" ಅಂತ ಸೀರೆಗಳ ಹಂದ ಹಾಕಿಕೊಂಡು ತಿರುವಿ ಹಾಕಿದ್ದೇ ಹಾಕಿದ್ದು. ಇದರ ಕಲರ್ ಚೆನ್ನಾಗಿದೆ, ಆದ್ರೆ ಬಾರ್ಡರ್ ಚೆನ್ನಾಗಿಲ್ಲಾ ಅಂತ ಹಾಡು.


ಅಂತೂ ಮತ್ತೆ ರಾತ್ರಿಗೆ ಹೋಟೆಲ್ ಸೇರಿ ಊಟ ಆಯಿತು. ಮತ್ತೆ ಬೆಳಿಗ್ಗೆ ಈ ಥಯ್ಯಾ ಮಾಮ – ಡಾಕ್ಟರ್‌ಮಾಮ, ಮತ್ತೆ ಕಾಶಿ ವಿಶ್ವನಾಥನನ್ನು ನೋಡೋಕೆ ಹೋದ್ರು. ಮಿಕ್ಕವರೆಲ್ಲಾ ಆ ಮಂದಿರ ಈ ಮಂದಿರ ನೋಡೋಕೆ ಹೊದರು. ಕಾಶಿಯಲ್ಲಿ ಎಲ್ಲಿ ಕಾಲಿಟ್ಟರೂ ಅಲ್ಲಿ ಒಂದು ದೇವ ಮಂದಿರ ಏಳುತ್ತೆ.




ಬೆಳಿಗ್ಗೆ ತಿಂಡಿ ಆದ ಮೇಲೆ ಎಲ್ಲರೂ ಭಾರತ ಮಾತಾ ಮಂದಿರ ನೋಡಲು ಹೋದರು. ಅದು ಹೊಸ ಮಂದಿರವಾದರೂ, ನಮ್ಮ ಭಾರತ ಮಾತೆಯನ್ನು ನೆನೆಯುವ ದೇಗುಲವಾದುದರಿಂದ ನಾವೆಲ್ಲರೂ ನಿಷ್ಠೆಯಿಂದ ನೋಡಿದೆವು. ಆಮೇಲೆ ಬನಾರಸ್ ಹಿಂದೂ ಯುನಿವರ್ಸಿಟಿಗೆ ಹೋದೆವು. ತುಂಬಾ ದೊಡ್ಡ ಕ್ಯಾಂಪಸ್. ಅಲ್ಲಿ ಎಲ್ಲಾ ವಿಭಾಗಗಳನ್ನು ನೋಡುವುದು ಸುಲಭವಲ್ಲ. ಆದ್ದರಿಂದ ಅಲ್ಲಿ ಆರ್ಕಿಟೆಕ್ಚರ್ ಹಾಗೂ ಸಾಂಸ್ಕೃತಿಕ ವಿಭಾಗಕ್ಕೆ ಹೋದೆವು. ಅದನ್ನು ದೇವಾಲಯದ ರೀತಿಯಲ್ಲಿಯೇ ಕಟ್ಟಿದ್ದಾರೆ. ಹೆಬ್ಬಾಗಿಲಿನ ಮೇಲೆಯೇ "ಸ್ವಾಸ್ತಿಕ" ಗಳನ್ನು ಹಾಕಿದ್ದಾರೆ. ಅಲ್ಲಿಂದಾನೆ ಶುರು ಈ ಡಾಕ್ಟರ್ ಮಾಮಂದು." ಎಲ್ಲಾ ತಪ್ಪು ತಪ್ಪಾಗಿ ಹಾಕಿದ್ದಾರೆ" ಅಂತ. ಒಳಗೆ ದೇವಾಲಯವೂ ಇದೆ. ಅಲ್ಲಿದ್ದ ಭಟ್ಟ ಆ ದೇವರು ಕಾಣಬಾರದ ಹಾಗೆ, ಬಾಗಿಲಲ್ಲೇ ಅಡ್ಡ ನಿಂತು ಪ್ರಸಾದ ಕೊಡುತ್ತಿದ್ದ. "ಸ್ವಲ್ಪ ಈಚೆಗೆ ಸರಿ ಅಂತ ಹೇಳಿದ್ರೂ ಹಾಗೆಯೇ ನಿಂತ. ಸರಿ ಅಲ್ಲಿಂದ ಪಾರಾಗಿ ಇನ್ನೊಂದೆಡೆಗೆ ಬಂದು ದೇವಾಲಯದ ಸುತ್ತ- ಮುತ್ತ ತಿರುಗಿ ನೋಡಿದೆವು. ಮತ್ತೆ ಹೊರಗೆ ಬರುತ್ತಿರುವಾಗ, ಈ ಡಾಕ್ಟರ್‌ಮಾಮ ಮತ್ತೆ ಆಫೀಸ್‌ನೊಳಗೆ ಹೋಗಿ, ಆ ಅಡ್ಮಿನಿಸ್ಟ್ರೇಟರ್‌ನ ಹೊರಗೆ ಕರೆತಂದು, "ನೀವು ಬನಾರಸ್ ಯುನಿವರ್ಸಿಟಿಯವರು ಸಂಶೋಧನೆ ಮಾಡುವವರು, ಹೀಗೆ "ಸ್ವಾಸ್ತಿಕ" ಬರೆಯುವುದೇ?



ನಿಮ್ಮ ಟ್ರಸ್ಟಿಗಳಿಗೆ ಹೇಳಿ, ತಿದ್ದಿ" ಅಂತ ಅವನನ್ನ ಮೂದಲಿಸಿ ಹೊರಟರು. ಹೊರಗೆ ಬಂದ ಕೂಡಲೇ ಅಲ್ಲಿ ಏನೋ ತಣ್ಣಗೆ ಕುಡಿಯಬೇಕೆಂದು ಈ ಪದ್ಮಾಎಲ್ಲರಿಗೂ ಒಂದು ಪಾನಕ ತರಿಸಿಕೊಟ್ಟಳು. ಅದನ್ನು ನೋಡುತ್ತಿದ್ದಂತೆ ಅಲ್ಲಿ ಮಕ್ಕಳು ಗುಂಪಾಗಿ ಬಂದು, " ನಮಗೆ ತಿನ್ನೋಕೆ ಏನೂ ಇಲ್ಲ, ಆ ವಡೆ ಕೊಡಿಸಿ" ಅಂತ ಕೂಗಿದರು. ಸರಿ ಅವರಿಗೆ ಅದನ್ನು ಕೊಡಿಸಿ ಬಸ್ ಹತ್ತಿ ಮತ್ತೆ ಹೋಟೆಲ್‌ಗೆ ಬಂದೆವು. ತಿಂದಿದ್ದೇ ತಡ ಈ ಶ್ಯಾಮಲ, ರೇಷ್ಮಾ, ಪದ್ಮಾ, ನಾವು ಶಾಪಿಂಗ್ ಮಾಡಬೇಕಂತ ಹೊರಟರು. ಬುದ್ಧಿ ಇದ್ದವರು ಹೋಟೆಲ್‌ನಲ್ಲಿಯೇ ಮಲಗಿದ್ರು.



4 ಘಂಟೆಗೆ ದಶಾಶ್ವಮೇಧ ಘಾಟಿಗೆ ಹೊರಟರು. ಒಂದು ಗುಂಪು ಮೊದಲೇ ಹೋಗಿ ಅಲ್ಲಿ ಕೂತರು. ಆದರೆ ಈಗ ಗಂಗಾ ನದಿಯಲ್ಲಿ ನೆರೆ ಬಂದು, ನೀರು 4 ಅಡಿ ಹೆಚ್ಚಾದಾಗ, ಘಾಟಿನ ಎಷ್ಟೋ ಮೆಟ್ಟಿಲುಗಳು ಮುಳುಗಿ, ಅಲ್ಲಿ ನದಿಯ ಮುಂದಿರುವ ಮನೆಗಳ ಮೇಲೆ ಪುರೋಹಿತರು, ಗಂಗಾ ನದಿಗೆ ಪೂಜೆ ಮಾಡಿ ಆರತಿ ಎತ್ತುವುದನ್ನು ನೋಡಿದೆವು. ಇನ್ನು ಕೆಲವರು ನಾವೆಯಲ್ಲಿ ಕೂತು ಆರತಿಯನ್ನು ನೋಡಿದರು. ನೀರು ಕೆಳಗಿದ್ದಾಗ ಘಾಟಿನ ಮೇಲೆ ಪೂಜೆ - ಆರತಿ ಎತ್ತುವುದು ಇನ್ನೂ ಚೆನ್ನಾಗಿರುತ್ತೆ ಅಂತ ಅಲ್ಲಿನವರು ಹೇಳಿದರು.


# ಮುಂಬೈಯಲ್ಲಿ ಕರ್ಕಿ ಅವರ ಕನ್ನಡ ಕಾಯಕ



✎ ಪ್ರೊ. ಜಿ. ಎನ್. ಉಪಾಧ್ಯ

ಇಪ್ಪತ್ತನೆಯ ಶತಮಾನ ಕನ್ನಡ ಸಾಹಿತ್ಯದ ಮತ್ತೊಂದು ಸುವರ್ಣ ಯುಗ.

ಹೊಸಗನ್ನಡ ಸಾಹಿತ್ಯ ಏಕಕಾಲಕ್ಕೆ ಮೈಸೂರು, ಮಂಗಳೂರು, ಧಾರವಾಡ ಹಾಗೂ ಮುಂಬೈ ವಲಯಗಳಲ್ಲಿ ಬೆಳೆದು ಬಂದುದು ಈಗ ಇತಿಹಾಸ. 19ನೆಯ ಶತಮಾನದ ಕೊನೆಯ ಭಾಗದಲ್ಲಿ ಮುಂಬೈಯಲ್ಲಿ ಕರ್ಕಿ ವೆಂಕಟರಮಣ ಶಾಸ್ತ್ರಿ ಅವರು ಮಾಡಿದ ಕನ್ನಡ ಪರಿಚಾರಿಕೆ ಬಲು ದೊಡ್ಡದು. ಮಾಯಾನಗರಿ ಮುಂಬೈಯನ್ನು ಕನ್ನಡ ಸಾಹಿತ್ಯ ವಲಯವಾಗಿ ರೂಪಿಸಿ ಬೆಳೆಸಿದ ಕೀರ್ತಿ ಸಹ ಕರ್ಕಿ ಅವರಿಗೆ ಸಲ್ಲುತ್ತದೆ. ಹೊಸಗನ್ನಡದ ಅರುಣೋದಯ ಕಾಲಘಟ್ಟದಲ್ಲಿ ಆಗಿ ಹೋದ ಪ್ರಮುಖ ಸುಧಾರಣಾವಾದಿ ಲೇಖಕರಲ್ಲಿ ಅವರದು ದೊಡ್ಡ ಹೆಸರು. ಹದಿಹರೆಯದಲ್ಲೇ ಮುಂಬೈಗೆ ಆಗಮಿಸಿ ತಮ್ಮದೇ ಆದ ಛಾಪಖಾನೆಯೊಂದನ್ನು ಸ್ಥಾಪಿಸಿ ಕನ್ನಡ ಪತ್ರಿಕೆಗಳನ್ನು ಆರಂಭಿಸಿ ಮರಾಠಿ ಮಣ್ಣಿನಲ್ಲಿ ಸಮೃದ್ಧವಾದ ಕನ್ನಡದ ಬೆಳೆಯನ್ನು ತೆಗೆದ ಆದ್ಯ ಕನ್ನಡ ಹೋರಾಟಗಾರರೂ ಆಗಿದ್ದಾರೆ. ಪತ್ರಿಕೋದ್ಯಮವನ್ನು ಹೋರಾಟದ ಸಾಧನವನ್ನಾಗಿ ಮಾಡಿಕೊಂಡದ್ದು ಅವರ ವಿಶೇಷ ಸಾಧನೆ. ಮುಂಬೈ ಕನ್ನಡ ಕಾರಣ ಪುರುಷ ಕರ್ಕಿ ಅವರು ನಾಡಿಗೆ ಪ್ರಾಥ:ಸ್ಮರಣೀಯರೂ ಆಗಿದ್ದಾರೆ.




1885 ರಲ್ಲಿ ಹವ್ಯಕ ಸುಬೋಧ, 1888 ರಲ್ಲಿ ಹಿತೋಪದೇಶ ಪತ್ರಿಕೆಗಳನ್ನು ಆರಂಭಿಸಿದ ಅವರು ಮುಂಬೈಯಲ್ಲಿ ಕನ್ನಡದ ವಾತಾವರಣವನ್ನು ನಿರ್ಮಿಸಿ ಓದುಗರ ಒಕ್ಕೂಟವನ್ನು ಮಾಡಿದ ಧೀಮಂತ ಚೇತನ. ಕನ್ನಡದಲ್ಲಿ ಕೃತಿ ರಚನೆ, ಗ್ರಂಥ ಸಂಪಾದನೆ, ಪ್ರಕಟಣೆ,ಪ್ರಕಾಶನ, ಪ್ರಸಾರ ಕಾರ್ಯ ಆ ಮೂಲಕ ಸಮಾಜ ಸೇವೆ ಶಾಸ್ತ್ರಿಗಳ ಮುಖ್ಯ ಉದ್ದೇಶವಾಗಿತ್ತು. 1887ರಲ್ಲಿ ಇಗ್ಗಪ್ಪ ಹೆಗಡೇ ವಿವಾಹ ಪ್ರಹಸನ ಅಥವಾ ಕನ್ಯಾ ವಿಕ್ರಯದ ಪರಿಣಾಮವು ಎಂಬ ನಾಟಕವನ್ನು ಬರೆದು ಅಚ್ಚು ಹಾಕಿಸಿ ಮದುವೆ ಎಂಬ ಸಂಸ್ಥೆಯಲ್ಲಿನ ಶೋಷಣೆ, ಅನ್ಯಾಯ, ಅಪಸವ್ಯಗಳನ್ನು ಬೆಳಕಿಗೆ ಹಿಡಿದರು. ಇದು ಕನ್ನಡದ ಮೊದಲ ಸಾಮಾಜಿಕ ನಾಟಕ ಎಂಬುದು ಚಾರಿತ್ರಿಕ ಮಹತ್ವದ ಸಂಗತಿ. ಈ ನಾಟಕದ ಧೋರಣೆ ಬಂಡಾಯ ಸ್ವರೂಪದ್ದು. ಭ್ರಷ್ಟಾಚಾರದಲ್ಲಿ ತೊಡಗಿದ್ದ ಬ್ರಿಟಿಷ್ ಅಧಿಕಾರಿಗಳ ವಿರುದ್ಧ ತೊಡೆತಟ್ಟಿ, ಸಮರಸಾರಿ ತಮ್ಮ ಪತ್ರಿಕೆಗಳಲ್ಲಿ ಬರೆದು ಆಳುವ ವರ್ಗದ ಬೆವರಿಳಿಸಿದ ಅವರು ಧೀರ ಪತ್ರಿಕೋದ್ಯಮಿ ಎಂದೇ ಖ್ಯಾತರಾಗಿದ್ದರು. ಕರ್ಕಿ ಅವರು ಕೇವಲ ಮನೋರಂಜನೆಗಾಗಿ ಸಾಹಿತ್ಯ ರಚಿಸಿ ತಮ್ಮ ಪಾಡಿಗೆ ಸುಮ್ಮನಾದವರಲ್ಲ. ಸಾಹಿತ್ಯದ ಮೂಲಕ ಸಮಾಜ ಸುಧಾರಣೆಗೆ ಅವರು ಸತತವಾಗಿ ಪ್ರಯತ್ನಿಸಿದರು.

ತಮ್ಮ ಮಾತು ಕೃತಿಗಳ ಮೂಲಕ ದೇಶ ಕಟ್ಟುವ ಕಾಯಕ, ಸ್ವಾತಂತ್ರ್ಯ ಹೋರಾಟದಲ್ಲೂ ತೊಡಗಿಸಿಕೊಂಡು ಅನೇಕ ಬಗೆಯ ತೊಂದರೆಗಳನ್ನು ಎದುರಿಸಬೇಕಾಯಿತು. ಸತ್ಯ ಶುದ್ಧ ಕಾಯಕದ ಮೂಲಕ ಕನ್ನಡದ ಏಳಿಗೆ ಅವರ ಮೂಲ ಮಂತ್ರವಾಗಿತ್ತು. ನಾಡಿನ ಸಾಂಸ್ಕೃತಿಕ ಜೀವನವನ್ನು ರೂಪುಗೊಳಿಸುವ ಅತೀವವಾದ ಹಂಬಲ ಅವರಲ್ಲಿತ್ತು. ಅದನ್ನು ಅವರು ಮುಂಬೈಯಲ್ಲಿ ಏಕಾಂಗಿಯಾಗಿ ಸಾಧಿಸಿ ತೋರಿಸಿದರು.

1881ರಲ್ಲಿ ದಕ್ಷಿಣ ಯಾತ್ರಾ ಚರಿತ್ರೆ ಎಂಬ ಕೃತಿಯನ್ನು ಶಾಸ್ತ್ರಿ ಅವರು ಬರೆದು ಪ್ರಕಟಿಸಿದರು. ಇದು ಕನ್ನಡದ ಮೊದಲ ಪ್ರವಾಸ ಸಾಹಿತ್ಯ ಕೃತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಬಳಿಕ ಪ್ರಾಚೀನ ನಾಟ್ಯ ಕಥಾರ್ಣವ, ಅನಾರ್ಯರ ವಿವರ ಮೊದಲಾದ ಕೃತಿಗಳ ರಚನೆಯ ಮೂಲಕ ಕನ್ನಡ ಸಾಹಿತ್ಯ ಸಮೃದ್ಧಿಗೆ ಶ್ರಮಿಸಿದರು. ಬ್ರಿಟಿಷ್ ಅಧಿಕಾರಿಗಳು ಶಾಸ್ತ್ರಿ ಅವರ ಕಾರ್ಯ ವೈಖರಿಗೆ ಬೆದರಿ ಸುಳ್ಳು ಮೊಕದ್ದಮೆ ಹೂಡಿ ಅವರ ಮುದ್ರಣಾಲಯವನ್ನು ಮುಚ್ಚಿ ಇನ್ನಿಲ್ಲದ ತೊಂದರೆ ಕೊಟ್ಟರು. ಇದಾವುದಕ್ಕೂ ಸೊಪ್ಪು ಹಾಕದೇ ಅವರು ಕನ್ನಡದ ಕೈಂಕರ್ಯದಲ್ಲಿ ತಮ್ಮನ್ನು ಅದ್ದಿಕೊಂಡದ್ದು ಉಲ್ಲೇಖನಿಯ ಅಂಶ . ಮುಂಬೈಯಲ್ಲಿ ಇವತ್ತು ಕನ್ನಡ ತಕ್ಕ ಮಟ್ಟಿಗೆ ಉಸಿರಾಡುತ್ತಿದ್ದರೆ ಅದಕ್ಕೆ ಕಾರಣೀ ಭೂತರಾದವರು ಕರ್ಕಿ ವೆಂಕಟರಮಣ ಶಾಸ್ತ್ರಿ ಅವರು.

ಕರ್ಕಿ ಅವರು ಕನ್ನಡ ಗ್ರಂಥ ಸಂಪಾದನ ಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರವಾದುದು. 18,19ನೆಯ ಶತಮಾನದಲ್ಲಿ ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಉಪೇಕ್ಷೆಗೆ ಒಳಗಾದ ಮೂಲೆ ಪಾಲಾದ ಅನೇಕ

ಅಮೂಲ್ಯವಾದ ಕನ್ನಡ ತಾಡೋಲೆಗಳನ್ನು ಹುಡುಕಿ ತೆಗೆದು ಪರಿಷ್ಕರಿಸಿ ದಾನಿಗಳ ಸಹಾಯದಿಂದ ಪ್ರಕಟಿಸಿದ ಹಿರಿಮೆ ಅವರದು. ಮಹಾಕವಿ ಪರಮದೇವ ವಿರಚಿತ ತುರಂಗ ಭಾರತ ಶಾಸ್ತ್ರಿ ಅವರ ಶ್ರಮ, ಶ್ರದ್ಧೆಯಿಂದ ಕನ್ನಡಕ್ಕೆ ದಕ್ಕಿದೆ. ಮಹಾಭಾರತದ ಹದಿನೆಂಟು ಪರ್ವಗಳನ್ನು ಸಂಕ್ಷಿಪ್ತವಾಗಿ ಕನ್ನಡದಲ್ಲಿ ಹೇಳಿದ ಏಕೈಕ ಕವಿ ಪರಮದೇವ. ಅವನ ಮಹಾಕಾವ್ಯವನ್ನು ಶೋಧಿಸಿ ತೆಗೆದು ಪ್ರಕಟಿಸಿ ಕನ್ನಡ ನಾಡಿಗೆ ಈ ಪ್ರತಿಭಾಶಾಲಿ ಕವಿಯನ್ನು ಪರಿಚಯ ಮಾಡಿಕೊಟ್ಟರು.

ಅನಾಮಿಕ ಕವಿಯ ಶಂಕರಸಂಹಿತೆ, ಸಿದ್ಧಾಂತ ಕೌಮುದಿ, ಕನ್ನಡ ಪದ್ಯಾತ್ಮಕ ಭಗವದ್ಗೀತೆ, ಬೃಹತ್ ಸ್ತೋತ್ರ ರತ್ನಾಕರ, ಶ್ರೀಮತ್ ದೇವಿ ಭಾಗವತ, ರತಿ ಕಲ್ಯಾಣ, ಕೃಷ್ಣ ಸಂಧಾನ, ನಳಾರಣ್ಯ, ಕನ್ಯಾ ವಿಕ್ರಯ, ಚಂದ್ರಹಾಸೋಪಾಖ್ಯಾನ ಹೀಗೆ ಐವತ್ತಕ್ಕೂ ಹೆಚ್ಚು ಸಾಹಿತ್ಯ, ಶಿಕ್ಷಣ, ಯಕ್ಷಗಾನ, ಧಾರ್ಮಿಕ ಮೊದಲಾದ ಪ್ರಕಾರಗಳ ಹಸ್ತಪ್ರತಿಗಳನ್ನು ತಮ್ಮದೇ ಮುಂಬೈಯ ಭಾರತಿ ಮುದ್ರಣಾಲಯದಲ್ಲಿ ಪ್ರಕಟಿಸುವಲ್ಲಿ ಅವರು ಅಹರ್ನಿಶಿ ದುಡಿದರು. ಶಿವಮೊಗ್ಗ ಜಿಲ್ಲೆಯ ಕಿಬ್ಬಚ್ಚಲು ಮಂಜಮ್ಮ ಎಂಬ ಮಹಿಳಾ ಕವಿ ರಚಿಸಿದ ವೇದಾಂತ ತತ್ವಸಾರ ಎಂಬ ಕೃತಿಯನ್ನು 1886ರಲ್ಲಿ ಶಾಸ್ತ್ರಿ ಅವರು ಮುಂಬೈಯಲ್ಲಿ ಬೆಳಕಿಗೆ ತಂದರು. ಇದು ಕನ್ನಡ ಸಾಹಿತ್ಯದ ಮೊದಲ ಮಹಿಳಾ ಕೃತಿ ಎಂಬ ಅಭಿಪ್ರಾಯವಿದೆ. 1870-1890ರ ಅವಧಿಯಲ್ಲಿ ಕರ್ಕಿ ಅವರು ಮಾಡಿದ ಕನ್ನಡ ನುಡಿ ಮಣಿಹ ಯಾರನ್ನು ದಂಗುಬಡಿಸುತ್ತದೆ. ಹೊರ ನಾಡಾದ ಮುಂಬೈಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಯ ಬೀಜವನ್ನು ಬಿತ್ತಿ ಚಿನ್ನದ ಬೆಳೆ ತೆಗೆದ ಬೇಸಾಯಗಾರ, ವೀರ ಕನ್ನಡಿಗ ಕರ್ಕಿ ವೆಂಕಟರಮಣ ಶಾಸ್ತ್ರಿ ಎಂಬುದು ಅಭಿಮಾನದ ಸಂಗತಿ.

ಕರ್ಕಿ ಅವರ ಜೀವನ ಸಾಧನೆಯ ಹಿನ್ನೆಲೆಯಲ್ಲಿ ಮುಂಬೈಯ ಶಶಿಕಲಾ ಹೆಗಡೆ ಅವರು ಸೂರಿ ಪರ್ವ ಎಂಬ ಮಹತ್ವದ ಕೃತಿಯನ್ನು ಇತ್ತೀಚೆಗೆ ರಚನೆ ಮಾಡಿದ್ದು ಇದನ್ನು ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ ಪ್ರಕಟಿಸಿದೆ. ಕರ್ಕಿ ಅವರ ಸಾಂಸ್ಕೃತಿಕ ಪರಿಚಾರಿಕೆಯನ್ನು ತಿಳಿದುಕೊಳ್ಳಲು ಈ ಕೃತಿ ಒಂದು ಒಳ್ಳೆಯ ಕೈಪಿಡಿಯಂತಿದೆ.

# ನಗೆಹನಿ

✍ **ಸುಮನಾ**

## ಮೊದಲ ವಿಫಲ ಪ್ರೇಮ..ಹಾಸ್ಯ

ಅಮ್ಮ:: ಏ..ಗುಂಡಾ ಏಳೋ,ಸೋಂಬೇರಿ...🙎 ಅದೇನೋ ಆನ್ಲೈನ್ ನಲ್ಲಿ ಯೋಗ ಕಲೀತೀನಿ.. ಯೋಗಾನೇ ನನ್ನ,ಪ್ರೀತಿ,ಪ್ರಾಣ ಅಂತ ಬೊಂಬ್ಡ ಬಜಾಯಿಸ್ತಿದ್ಯಲ್ಲಾ ಏಳೇಳು, ಆಗ್ಲೇ ನೀನು ಹೇಳಿದ ಟೈಮ್ ಮೀರಿ ಹೋಗ್ತಿದೆ,

ನೆನ್ನೆ ತಾನೇ ಶುರು ಮಾಡಿದೀಯಾ..???

ಗುಂಡ:: ಅಯ್ಯೋ, ಹೋಗಮ್ಮ..ಆ ಯೋಗಾನಾ ಕಲೀಬೇಕು ಅಂತಾ ತುಂಬಾ ಪ್ರೇಮ, ಪ್ರೀತಿಯಿಂದ ನೆನ್ನೆ ಸೇರಿದ್ದೆ, ಯೋಗಾನೇ ನನ್ನ ಪ್ರೀತಿಯ ಗೆಳತಿ ಅಂತಿದ್ದೆ ಆದ್ರೆ..

ಅಷ್ಟು ಬೆಳಗಿನ ಜಾವ್ದಲ್ಲಿ ನಾನೆದ್ದು ಮಾಡಾಲ್ಲರೆ..

ಅಮ್ಮ::ಹ್ಞೂ, ಅದಕ್ಕೇನಂತೀಯಾ??

ಗುಂಡ:: ಅದೂ,ಅದೂ,ಯೋಗವೆಂಬ ನನ್ನ ಗೆಳತಿಯ ಜೊತೆಗೆ ನನ್ನ "ಮೊದಲ ವಿಫಲ ಪ್ರೇಮ ಕಣಮ್ಮಾ..😇😇

ಅಮ್ಮ..🤦🤦🤦🤦

*********

## ಐದು ಕೆ.ಜಿ. ಭಾರೀ ಉಡುಗೊರೆ..ಹಾಸ್ಯ..

ದೀಪು: ಅಜ್ಜೀ,ಇಲ್ಲಿ ನೋಡು ಅಪ್ಪ 5ಜೀ ಮೊಬೈಲು ಅಕ್ಕನಿಗೆಂದು ತಂದಿದ್ದಾರೆ.ನಿನಗೂ ನಿನ್ನ ಎಪ್ಪತ್ತನೇವರುಷದ ಹುಟ್ಟು ಹಬ್ಬಕ್ಕೆಂದು 5ಜೀ ಮೊಬೈಲು ಉಡುಗೊರೆಯಾಗಿ ತಂದುಕೊಡ್ತಾರಂತೆ ಅಂತ ದೀಪು ಅಂದಾಗ,

ಅಜ್ಜಿ ,ಅಯ್ಯೋ,ನನಗೆಕಿವಿಬೇರೆ ಸರಿಯಾಗಿ ಕೇಳೊಲ್ಲ,ನನಗೆ ಯಾಕಪ್ಪಾ ಐದು ಕೇಜೀ ಫೋನು ಅಷ್ಟೊಂದು ಭಾರೀ ಎತ್ತುವ ಶಕ್ತಿ ಈಗಇಲ್ಲ,ಆ ಉಡುಗೊರೆ ಬೇಡಾ ಮರೀ..ಬೇಡಾ ಅಂತಾ ಅಪ್ಪಂಗೆ ಹೇಳು...ಅಂದರು.

ದೀಪು ,ಅಯ್ಯೋ ಅಜ್ಜಿ , ಅಂತ ತಲೆ ಮೇಲೆ ಕೈ ಹೊತ್ತು ಕುಳಿತ..

# ಪ್ರವಾಸದ ಅನುಭವ ಕಥನ



✍ ಡಾ| ಸುಮಾ ದ್ವಾರಕಾನಾಥ್

## ಮಳೆಗಾಲದ ಪಿಕ್ನಿಕ್

ಅನುಜಾ ಮಹಿಳಾ ಸಂಘ, ಡೊಂಬಿವಿಲಿಯ ವಿಹಾರಗಳಲ್ಲಿ ಮಳೆಗಾಲದ ವಿಶೇಷತೆಯೂ ಸೇರಿದ್ದು ಒಂದು ಸೌಭಾಗ್ಯವೆನ್ನಬಹುದು, ಬೆಂಗಳೂರಿನವರಾದ ನಮಗೆ, ಮಳೆ ನಿಂತ ಮೇಲೆಯೇ ಮನೆಯಿಂದ ಹೊರಡುತ್ತಿದ್ದವರು ನಾವು , ಇಲ್ಲಿ ಮಳೆಯೊಂದಿಗೇ ಪ್ರವಾಸ ಮಾಡುವ ಖುಷಿಯ ಅನುಭವ ಪಡೆದೆವು. ಹಾಗಾಗಿ ಮಳೆಗಾಲದ ವಿಹಾರವೊಂದನ್ನು ಪ್ರತಿವರ್ಷ ನಾವು ಸಂಘದ ಸದಸ್ಯೆಯರಿಗೆ ನೀಡುತ್ತಿದ್ದೆವು.

ನಮ್ಮ ಸುತ್ತಮುತ್ತಲಿನ ಜಲಪಾತಗಳು , ಸಮುದ್ರತೀರಗಳು ನಮ್ಮನ್ನು ಕೈಬೀಸಿ ಕರೆಯುತ್ತಿದ್ದವು. ಸರಿ ಅಂತ ಮೊದಲನೆಯ ಪ್ರವಾಸ ಭಂಡಾರಧರಾ ಜಲಪಾತಕ್ಕೆ ಹೋಗುವುದೆಂದು ನಿರ್ಧರಿಸಿದೆವು.

ಸುಮಾರು ೬ ಗಂಟೆಗಳ ಕಾಲ ಪಯಣಿಸಬೇಕಾದ್ದರಿಂದ ಬೆಳಗ್ಗೆ ೬ ಗಂಟೆಗೇ ಬಸ್‌ನಲ್ಲಿ ಹೊರಟೆವು. ನಾವಿನ್ನೂ ಲಂನೆಯ ಇಸವಿಯಲ್ಲಿದ್ದುದರಿಂದ , ಮನೆಯಿಂದಲೇ ಕೆಲವರು ಇಡ್ಲಿ, ಕೆಲವರು ಚಟ್ನಿ , ಕೆಲವರು ಚಿತ್ರಾನ್ನ, ಕೆಲವರು ಮೊಸರನ್ನ ಹೀಗೆ ಊಟದ ಏರ್ಪಾಡು ಮಾಡಿಕೊಂಡು ಬಸ್‌ಹತ್ತಿದೆವು. ದಾರಿಯುದ್ದಕ್ಕೂ ಮೊದಲು ಭಜನೆ, ಆಮೇಲೆ ಅಂತಾಕ್ಷರಿ ಹಾಡಿಕೊಂಡು ದಾರಿ ಸವೆಸಿದ್ದಾಯ್ತು. ಪ್ರವರಾ ನದಿಯ ಜಲಪಾತವೇ ಭಂಡಾರ್ಧರಾ. ಅಲ್ಲಿಯ ಜಲಪಾತ, ಬೆಟ್ಟಗಳು, ವಿಲ್ಸನ್‌ಅಣೆಕಟ್ಟು, ಆರ್ಥರ್ ಲೇಕ್‌ಮತ್ತು ರಂಧಾ ಫಾಲ್ಸ್‌ಇವುಗಳೇ ಅಲ್ಲಿಯ ಆಕರ್ಷಣೆ. ಮೌಂಟ್ ಕಲ್ಸೂಬಾಯಿ ಮಹಾರಾಷ್ಟ್ರದ ಅತಿ ಉನ್ನತ ಶಿಖರ. (೫೪೦೦ ಅಡಿ). ಸುಮಾರು ೫-೬ ವಿವಿಧ ಹೆಸರಿನ ಜಲಪಾತಗಳನ್ನು ಇಲ್ಲಿ ಕಾಣಬಹುದು. ವಸುಂಧರಾ, ಬಾಹುಬಲಿ, ನ್ಹಾನಿ, ನೆಕ್ಲೇಸ್, ಕೋಲ್ತೆಂಬೆ ಮತ್ತು ರಂಧಾ ಜಲಪಾತಗಳು. ನನ್ನ ನೆನಪಿನಲ್ಲಿ ಇಂದಿಗೂ ಉಳಿದಿರುವುದೆಂದರೆ ಜಲಪಾತದ ಹಿಂದಿನಿಂದ ಶಾಂತವಾಗಿ ಹರಿಯುವ ನೀರಿನಲ್ಲಿ ನಡೆದುಕೊಂಡು ಹೋಗಿ , ನೀರು ಅಷ್ಟು ಆಳಕ್ಕೆ ಧುಮುಕುವುದನ್ನು ಕಂಡುಕೊಂಡಾಗ ಆದ ಆಶ್ಚರ್ಯ ಇಂದಿಗೂ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

ಹಾದಿಯಲ್ಲಿ ವಾಪಸ್ಸು ಬರುವಾಗ ವೈತರಣಾ ಮತ್ತು ತುಳಸಿ ಲೇಕ್‌ಗಳನ್ನೂ ನೋಡಿದ್ದ ನೆನಪು. ನಮ್ಮ ಬಾಲ್ಯದಲ್ಲಿ ವೈತರಣಿ ನದಿಯನ್ನು , ನಾವು ಸತ್ತಮೇಲೆ ಆತ್ಮ ದಾಟುತ್ತದೆ ಎಂದು ಪುರಾಣಗಳಲ್ಲಿ ಕೇಳಿದ್ದ ನೆನಪು, ಅದೂ ಎಷ್ಟು ಭಯಾನಕ ಎಂದರೆ ರಕ್ತ ಮಾಂಸಗಳಿಂದ ತುಂಬಿರುವ ನದಿ ಎಂದು. ಆದರೆ ಮುಂಬಯಿಗೆ ಬಂದ ಮೇಲೆ ತಿಳಿದ ವಾಸ್ತವ ಎಂದರೆ ವೈತರಣಿ ನದಿಯಿಂದಲೇ ಕುಡಿಯುವ ನೀರು ಮುಂಬಯಿಗೆ ಪೂರೈಸಲಾಗುತ್ತದೆ ಎನ್ನುವ ವಿಷಯ. ಆಗಂತೂ ನಮ್ಮ ಕೂಪ ಮಂಡೂಕತ್ವಕ್ಕೆ ಅಳಬೇಕೋ ನಗಬೇಕೋ ತಿಳಿಯಲಿಲ್ಲ.

ಎರಡನೆಯ ಪ್ರವಾಸವೆಂದು ಹತ್ತಿರದ ಮಾಲ್ಶೇಜ್‌ಘಾಟ್‌ಗೆ ಒಂದು ದಿನದ ಪ್ರವಾಸ ಹೊರಟೆವು. ಪ್ರತಿವರ್ಷವೂ ಒಂದು ದೀರ್ಘ ಮತ್ತು ಒಂದು ಚಿಕ್ಕ ಪ್ರವಾಸ ಏರ್ಪಡಿಸುತ್ತಿದ್ದೆವು. ಅಲ್ಲಂತೂ ಎಂಥಾ ಅನುಭವ! ಬೆಟ್ಟ ಏರುತ್ತಿದ್ದಂತೆ ಹತ್ತು ಹೆಜ್ಜೆಗೊಂದು ಸಣ್ಣಸಣ್ಣ ಜಲಪಾತಗಳು. ಸುಮಾರು ೧೪೪ ಜಲಪಾತಗಳು ನಮಗೆ ದಾರಿಯುದ್ದಕ್ಕೂ ಎದುರಾದವು. ಸಾಧ್ಯವಾದಷ್ಟು ಜಲಪಾತಗಳ ನೀರಿನಲ್ಲಿ ನೆನೆದುಕೊಂಡೇ ಮೇಲೇರುತ್ತಿದ್ದುದು ಒಂದು ಅಪೂರ್ವ ಅನುಭವ. ಮೋಡಗಳು ಆಕಾಶದಲ್ಲಿರದೇ ನಾವೇ ಮೋಡದೊಳಗಿರುತ್ತಿದ್ದುದು ಒಂದು ವಿಶೇಷ ಅನುಭವ. ಅಲ್ಲಿಯ ಕಣಿವೆಯ ಸೌಂದರ್ಯವನ್ನು ಆಸ್ವಾದಿಸುತ್ತಿರುವಾಗಲೇ ಇನ್ನೊಂದು ಆಶ್ಚರ್ಯ ಕಾದಿತ್ತು. ನಾವು ಕಾಗದವನ್ನು ಗಾಳಿಗೆ ತೂರಿದರೆ ಅದು ಕೆಳಗೆ ಬೀಳದೆ ನಮ್ಮ ಹತ್ತಿರವೇ ವಾಪಸ್ಸು ಬರುತ್ತಿತ್ತು. ಗಾಳಿ ಅದನ್ನು ಹಿಂದೆ ನಮಗೇ ವಾಪಸ್ಸಾಗುವಂತೆ ಬೀಸುತ್ತಿತ್ತು. ಸಂಜೆವರೆಗೆ ಅಲ್ಲೇ ಸುತ್ತಾಡಿ ಕಾಲ ಕಳೆದು ಬಂದೆವು. ಅಷ್ಟವಿನಾಯಕದ ಪಟ್ಟಿಯಲ್ಲಿರುವ ಮಹಡ್‌ಗಣಪತಿಯನ್ನೂ ಸಂದರ್ಶಿಸಿ ಬಂದೆವು. ನಮ್ಮ ಕಡೆಯ ದೇವಾಲಯಗಳಲ್ಲಿ , ಭವ್ಯವಾದ ದೇವರ ಮೂರ್ತಿಗಳನ್ನು , ಹೂವಿನ ಅಲಂಕಾರಗಳನ್ನು ನೋಡಿದವರಿಗೆ ಇಲ್ಲಿಯ ಮೂರ್ತಿಯ ಆಕಾರ , ಹಾರವೆನ್ನುವ ಬರೀ ಎರಡು ಚೆಂಡು ಹೂವಿರುವ ದಾರದ ಹಾರ ಮನಸ್ಸಿಗೆ ಪಿಚ್ಚೆನಿಸುತ್ತಿತ್ತು.

ಮತ್ತೆ ಮುಂದಿನ ವರ್ಷ ಸಣ್ಣ ಪ್ರವಾಸವೆಂದು ಹತ್ತಿರದಲ್ಲೇ ಇದ್ದ ವಜ್ರೇಶ್ವರಿಗೆ ಹೋಗಿದ್ದಾಯಿತು. ಅದು ಅಗ್ನಿಪರ್ವತದ ಸ್ಫೋಟದಿಂದ ರೂಪುಗೊಂಡ ಸ್ಥಳವಾದ್ದರಿಂದ ಅಲ್ಲಲ್ಲೇ ಬಿಸಿನೀರಿನ ಬುಗ್ಗೆಗಳಿದ್ದವು. ಗಂಧಕದ ನೀರು ರೋಗಗಳನ್ನೂ ನಿವಾರಿಸುವುದರಿಂದ , ಜನರು ಆ ನೀರನ್ನೂ ಕಲುಷಿತಗೊಳಿಸಿದ್ದರು. ಆ

ಊರಿನ ದೇವತೆ ವಜ್ರೇಶ್ವರಿ ಆದ್ದರಿಂದ ಊರಿಗೆ ಆ ಹೆಸರು ಬಂದಿದೆ. ಪ್ರಕೃತಿಯ ವೈಚಿತ್ರವನ್ನು ಕಂಡು ನಾವು ಬೆರಗಾದೆವು.

ಈ ವರ್ಷ ಮೂರು ದಿನದ ಪ್ರವಾಸವೆಂದು ಮುರುಡ್,ಜಂಜೀರಾ, ಶ್ರೀವರ್ಧನ, ಹರಿಹರೇಶ್ವರ್ ಸುತ್ತಿ ಬರುವುದೆಂದು ನಿರ್ಧರಿಸಿದೆವು. ಡೊಂಬಿವಿಲಿಯಿಂದ ನಾವುಗಳು ಕುಟುಂಬ ಸಮೇತರಾಗಿ ಹೊರಡುತ್ತಿದ್ದರೂ ಪ್ರತಿ ಸಲ ಬಸ್ ತುಂಬುವುದು ಕಷ್ಟವಾಗುತ್ತಿತ್ತು. ಹಾಗಾಗಿ ನಮ್ಮ ಪರಿಚಯದವರೆಲ್ಲರನ್ನೂ ಹೊರಡಿಸುತ್ತಿದ್ದೆವು. ನಮ್ಮ ಖರ್ಚು ಕಡಿಮೆಯಾಗುತ್ತದೆನ್ನುವ ಒಂದು ಉದ್ದೇಶವೂ ಇರುತ್ತಿತ್ತು. ನಮ್ಮ ಮನೆಯವರ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವವನೊಬ್ಬನ ನೆಂಟ ಹರಿಹರೇಶ್ವರದಲ್ಲಿ ಎಮ್.ಎಲ್.ಎ. ಆಗಿದ್ದ . ನಮ್ಮನೆಯವರು ತುಂಬು ಉತ್ಸಾಹದಿಂದ ಅಲ್ಲಿಯ ವ್ಯವಸ್ಥೆಗೆ influence ಮಾಡಿದ್ದರು.

ಹೊರಟಿತು ನಮ್ಮ ಪಯಣ ಮುರುಡ್, ಜಂಜೀರಾ ಕೋಟೆಗೆ. ಮುರುಡ್ಇಂದ ೫೦ - ೬೦ ಅಡಿ ಆಳವಿರುವ ಅರಬ್ಬೀ ಸಮುದ್ರದೊಳಗೆ ,ದೋಣಿಯಲ್ಲಿ ಸುಮಾರು ಅರ್ಧಗಂಟೆ ಪಯಣಿಸಿ ೪ ಕಿಮೀ ದೂರವಿರುವ ಜಂಜೀರಾ ಕೋಟೆ ತಲುಪಿದೆವು. ಮುರುಡ್ ಎನ್ನುವುದು ಕೊಂಕಣಿ ಪದವಾದರೆ, ಜಂಜೀರಾ ಎನ್ನುವುದು ಅರಾಬಿಕ್ ಪದ, ದ್ವೀಪ ಎನ್ನುವ ಅರ್ಥ ಕೊಡುತ್ತದೆ. ಇದೊಂದು ದಕ್ಷಿಣ ಕೊಂಕಣ ಕರಾವಳಿ ವಿಭಾಗದಲ್ಲಿ ಸಾವಿರ ವರ್ಷಗಳ ಹಿಂದೆ ೨೨ ಎಕರೆ ಭೂಮಿಯಲ್ಲಿ ಅಂಡಾಕಾರದಲ್ಲಿ ಕಟ್ಟಿರುವ ಕೋಟೆ. ಒಳ್ಳೆ ಜಲದುರ್ಗಕ್ಕೆ ಉದಾಹರಣೆ ಎನ್ನಬಹುದು. ಆಶ್ಚರ್ಯವೆಂದರೆ ಸುತ್ತಲೂ ಉಪ್ಪುನೀರಿನ ಸಮುದ್ರದಿಂದ ಸುತ್ತುವರೆದಿದ್ದರೂ , ಕೋಟೆಯ ಒಳಗೆ ಕುಡಿಯಲು ಯೋಗ್ಯವಾದ ಸಿಹಿ ನೀರಿನ ಬುಗ್ಗೆಗಳಿರುವುದು. ಅಂದಾಜಿನಲ್ಲಿ ಸುಮಾರು ೫೫೦ ಜನ ಕೋಟೆಯ ಒಳಗೆ ವಾಸಿಸುತ್ತಿದ್ದರೆನ್ನಲಾಗುವುದು. ಇಂದಿಗೂ ಅವರ ವಂಶಸ್ಥರನ್ನು ಮುರುಡ್ ಹಳ್ಳಿಯಲ್ಲಿ ಕಾಣಬಹುದು. ಕೋಟೆಯೊಳಗೆ ಸುಮಾರು ೨೨ ಕಾವಲು ಗೋಪುರಗಳು ಇನ್ನೂ ದುಸ್ಥಿತಿಯಲ್ಲೇ ಇದೆ. ಇದು ಕೊಂಕಣದ ಸೀಮೆಯಲ್ಲೇ ಭದ್ರವಾಗಿ ಕಟ್ಟಿದ ಕೋಟೆ ಎನ್ನಬಹುದು. ಮಲಿಕ್ ಅಂಬರ್ಎನ್ನುವವನು ಈ ಕೋಟೆಯನ್ನು ಕಟ್ಟಿದನೆಂದು ಪ್ರತೀತಿ. ಇದನ್ನು ಸುಮಾರು ವರ್ಷಗಳ ಕಾಲ ಅಬಿಸೀನಿಯಾದ ಮುಸ್ಲಿಮರಾದ ಸಿದ್ದಿ ಎನ್ನುವ ಜನಾಂಗ ಮೊನ್ನೆ ಮೊನ್ನೆಯವರೆಗೂ ಭಾರತ ಸರಕಾರ ಸ್ವತಂತ್ರವಾಗಿ, ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳುವವರೆಗೆ ಅಭೇಧ್ಯವಾಗೇ ಇತ್ತು. ನಾಜ್ಹಿಮ್ಶಾಹಿಗಳು, ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಇಂಗ್ಲೀಷರು ಮತ್ತು ಮರಾಠಾ ಶಿವಾಜಿರಾಜನಿಗೂ ಈ ಕೋಟೆ ಸಗ್ಗಿರಲಿಲ್ಲ ಎನ್ನುವುದು ಈ ಕೋಟೆಯ ವಿಶೇಷ. ಕೋಟೆಯ ಹೆಬ್ಬಾಗಿಲು ತಲುಪುವವರೆಗೂ ನಮಗೆ ಒಳಹೋಗುವ ಅಂದಾಜು ಬರುವುದಿಲ್ಲ. ಸೀದಾ ಸಮುದ್ರದಿಂದ ಕೋಟೆಯ ಬಾಗಿಲಿನ ಮೆಟ್ಟಲಿಗೇ ಹತ್ತಬೇಕು. ಈಗ ಕೋಟೆ ಪಾಳುಬಿದ್ದ ಸ್ಥಿತಿಯಲ್ಲಿರುವುದರಿಂದ, ಅಲ್ಲಿ ಊಟ ತಿಂಡಿ, ನೀರು ಏನೂ ವ್ಯವಸ್ಥೆ ಇಲ್ಲ. ಹಾಗಾಗಿ ನಾವು ಅಲ್ಲಿಂದ ಬೇಗ ವಾಪಸ್ಸು ಬರಬೇಕಾಯ್ತು. ಮತ್ತೆ ಮುರುಡ್ಗೆ ದೋಣಿಯಲ್ಲಿ ಪಯಣಿಸಿ ಮುರುಡ್ ಗೆ ಬಂದೆವು.

ನಮ್ಮ ಮುಂದಿನ ಪಯಣ ಹರಿಹರೇಶ್ವರಕ್ಕೆ. ಸುಮಾರು ೫-೬ ಗಂಟೆಗಳ ಪಯಣ ಮುಗಿಸಿ ಸಂಜೆ ಹೊತ್ತಿಗೆ ಹರಿಹರೇಶ್ವರ ತಲುಪಿದೆವು. ಕೊಂಕಣ ಸೀಮೆಯಲ್ಲಿ ಹರಿಹರೇಶ್ವರ , ದೇವಾಲಯ ಮತ್ತು ಬೀಚುಗಳಿಗೆ ಪ್ರಸಿದ್ದಿ. ಅದನ್ನು ದೇವ ಭೂಮಿ ಅಥವಾ ದೇವಾಲಯಗಳ ಊರೆಂದೂ ಕರೆಯಲಾಗುತ್ತದೆ. ಅಲ್ಲಿ ಎರಡು ತರಹದ ಬೀಚುಗಳಿವೆ. ಒಂದು ೨.೪ ಕಿ.ಮೀ ದೇವಾಲಯದ ಎದುರಿಗೇ ಇರುವ ಬೀಚು. ಇನ್ನೊಂದು ೨ ಕಿ.ಮೀ ಎಲ್ ಆಕಾರದಲ್ಲಿರುವ ಬೀಚು. ನಮ್ಮ ಮನೆಯವರ ಶಿಫಾರಸ್ಸಿನ ಪತ್ರದ ಮೂಲಕ ಬೆಟ್ಟದ ಮೇಲಿರುವ ಗೆಸ್ಟಹೌಸ್ನಲ್ಲಿ ರೂಮ್ಗಳನ್ನು ನಮಗೆ ಅಲಾಟ್ಮಾಡಲಾಯಿತು. ಸಂಜೆ ಸೂರ್ಯ ಮುಳುಗುವ ಸಮಯವಾದ್ರಿಂದ ಎಲ್ಲರೂ ಲಗೇಜ್ ಇಟ್ಟು , ಬೀಚಿಗೆ ಓಡಿದೆವು. ಕತ್ತಲಾಗುವ ತನಕ ನೀರಿನಲ್ಲಿ ಆಟವಾಡಿ ರೂಮಿಗೆ ವಾಪಸ್ಸು ಬಂದರೆ ಅಲ್ಲಿ ಕಂಡಿದ್ದೇನು! ನಮ್ಮ ಜೊತೆ ಬಂದ ಒಂದು ಕೊಂಕಣಿ ಕುಟುಂಬ ತಾವು ಸ್ವಚ್ಛವಾಗಲು , ಇಡೀ ಟ್ಯಾಂಕಿನ ನೀರನ್ನು ಮುಗಿಸಿ , ಮನೆಯನ್ನೆಲ್ಲಾ ಬೀಚಿನ ಮರಳಲ್ಲಿ ಹರಡಿಬಿಟ್ಟು ,ಯಾವೊಂದು ಸಂಕೋಚವಿಲ್ಲದೆ ತಮ್ಮ ಹಕ್ಕು ಎನ್ನುವ ಭಾವದಲ್ಲಿದ್ದುದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಬಸ್ ತುಂಬಲು ಜನ ಕರೆದುಕೊಂಡು ಬಂದದ್ದು ನಮ್ಮ ತಪ್ಪು ಎನ್ನುವ ಅರಿವು ನಮಗಾಯ್ತು. ಕೈಕಾಲು ತೊಳೆಯಲೂ ನೀರಿಲ್ಲದೆ , ಪೆಚ್ಚು ಮುಖದಿಂದ ರಾತ್ರಿ ಊಟಕ್ಕೆ ಹೊರೆಟೆವು. ಯಾವುದೋ ಸಣ್ಣ ಹೋಟೆಲ್ನಲ್ಲಿ ಮಹಾರಾಷ್ಟ್ರದ ತಿಂಡಿ ಪೋಹ ಅಂದ್ರೆ ಅವಲಕ್ಕಿ ಮಾಡಿಸಿಕೊಂಡು ತಿಂದು ಮಲಗಿದೆವು. ಬೆಳಗ್ಗೆ ಸ್ನಾನ ಮುಗಿಸಿ ಹರಿಹರೇಶ್ವರನ ದರ್ಶನ ಮಾಡಿಕೊಂಡು , ತಿಂಡಿ ತಿನ್ನಲು ಸಮಯವಿಲ್ಲದ್ದರಿಂದ , ಕೇರ್ಟೇಕರ್ಗೇ ಹೇಳಿ ಉಪ್ಪಿಟ್ಟು ಮಾಡಿಸಿಕೊಂಡು ದಾರಿಯಲ್ಲೇ ತಿನ್ನೋಣವೆಂದು ಯೋಜನೆ ಹಾಕಿಕೊಂಡಿದ್ದೆವು. ಅಷ್ಟರಲ್ಲಿ ನನ್ನ ಗೆಳತಿ ಸುಧ , ಬನ್ನಿ ಸುಮ ಒಂದು ಅದ್ಭುತ ತೋರಿಸುತ್ತೇನೆ ಎಂದು ಕರೆದುಕೊಂಡು ಹೋದಳು. ದೇವಾಲಯದ ಪಕ್ಕದಲ್ಲೇ ಇದ್ದ ಬಂಡೆಗಳನ್ನು ಹತ್ತಿಹೋದರೆ ಕಂಡಿದ್ದೇನು! ಎರಡು ದೊಡ್ಡ ಕೋಡುಗಲ್ಲಿನ ನಡುವೆ ಕಾಣುವ ಅಪಾರ ಸಮುದ್ರ. ನನಗಂತೂ ದೇವರು

ಗುಡಿಯೊಳಗಿಲ್ಲ, ಇಲ್ಲೇ ಪ್ರಕೃತಿಯ ಭೂಮದಲ್ಲೇ ಇದ್ದಾನೆ ಎನ್ನುವ ಭವ್ಯ ಅನುಭವವಾಯಿತು. ಜಿ.ಎಸ್ ಶಿವರುದ್ರಪ್ಪನವರ ಕಾವ್ಯ  ನೆನಪಿಗೆ ಬಂತು. "ಎಲ್ಲೋ ಹುಡುಕಿದೆ ಕಾಣದ ದೇವರ ಕಲ್ಲುಮಣ್ಣುಗಳ ಗುಡಿಯೊಳಗೇ" ಅದನ್ನು ಗುನುಗುನಿಸುತ್ತಾ ಬಸ್ಸಿಗೆ ಬಂದೆವು. ಇಷ್ಟು ವರ್ಷವಾದರೂ ಅದನ್ನು ನೆನಸಿಕೊಂಡ್ರೆ ಮೈಝುಮ್ ಎನ್ನುತ್ತೆ. ಒದುಗಾ ನಿಮಗೆ ಅದರ ಅನುಭವ ಬೇಕಾದರೆ , ಇಲ್ಲಿ ಫೋಟೊ ಹಾಕಿದರೂ ಅಷ್ಟು ಪರಿಣಾಮ ಬರುವುದಿಲ್ಲ. ಈಗೆಲ್ಲಾ you tube ಅನುಕೂಲ ಇರುವುದರಿಂದ ನೀವೂ ನೋಡಿ ಆನಂದಿಸಬಹುದು.

ಈ ಆನಂದದ ನಶೆಯಲ್ಲೇ ಬಸ್‌ಹತ್ತಿರ ಬಂದರೆ, ನಾವು ಆರ್ಡರ್‌ಕೊಟ್ಟ ಉಪ್ಪಿಟ್ಟು ಇನ್ನೂ ಬಂದಿರಲೇ ಇಲ್ಲ. ಬಸ್ ಹೊರಡುವ ಹೊತ್ತಾಯಿತೆಂದು ಅವನನ್ನು ಅವಸರಿಸಿದರೆ , ಈಗ ತರ್ತೀನಿ ಅಂತ ಅರ್ಧ ಗಂಟೆ ಕಾಯಿಸಿ ಕೊನೆಗೆ, ನಾವೆಲ್ಲಾ ಗಲಾಟೆ ಮಾಡಿದ ಮೇಲೆ ಒಂದು ದೊಡ್ಡ ಕಾಗದದ ಪೊಟ್ಟಣ ತಂದುಕೊಟ್ಟು ದುಡ್ಡು ಇಸ್ಕೊಂಡು ಹೋದ. ಸರಿ ಬಸ್ ಹೊರಟಿತು. ಲೇಟ್ ಆಯಿತು ಅಂತ ಸ್ವಲ್ಪ ಮುಂದೆ ಹೋಗಿ  ಪೊಟ್ಟಣ ಬಿಚ್ಚಿ ನೋಡಿದ್ರೆ ನಮಗೆ ಶಾಕ್.ಸುಮಾರು ಎರಡು ಕೆಜಿ ಕಚ್ಚಾ ರವೆಗೆ ನಾಲ್ಕು ಕಾಳು ಸಾಸಿವೆ ಒಗ್ಗರಣೆ ಹಾಕಿ ಕಟ್ಟಿಕೊಟ್ಟಿದ್ದ. ಎಲ್ಲರಿಗೂ ಹಸಿವು ಬೇರೆ. ಬಸ್ ಸಹ ದೂರ ಬಂದು ಬಿಟ್ಟಿತ್ತು. ಹಿಂದಿನ ದಿನ ನಮ್ಮ ಮ್ಯಾನೇಜರ್ ಅವನಿಗೆ ಊಟ ಹೇಳದೆ, ಹೋಟೆಲ್‌ನಲ್ಲಿ ವ್ಯವಸ್ಥೆ ಮಾಡಿದ್ದರು. ಮತ್ತೆ ಆ ದಿನ ನಾವು ನಮ್ಮ ಬುದ್ಧಿವಂತಿಕೆಯಿಂದ ೨ ಕೆಜಿ ಉಪ್ಪಿಟ್ಟು ಬೇಕು ಎಂದಿದ್ದೆವು. ಅವನು ಪ್ಲೇಟ್‌ಲೆಕ್ಕಾಚಾರ ಹಾಕಿದ್ದ. ಹಾಗಾಗಿ ಅವನಿಗೇನೂ ಗಿಟ್ಟುತ್ತಿರಲಿಲ್ಲ . ಆದ್ದರಿಂದ ಈ ರೀತಿ ಸೇಡು ತೀರಿಸಿಕೊಂಡಿದ್ದ. ಪುಣ್ಯಕ್ಕೆ ದೀಪಾವಳಿ ನಂತರ ಪ್ರವಾಸ ಮಾಡಿದ್ದರಿಂದ ಎಲ್ಲರ ಬಳಿಯೂ ದೀಪಾವಳಿ ತಿಂಡಿ ಇತ್ತು ಅದನ್ನೇ ಸಿಟ್ಟು, ಕೋಪ, ನಿರಾಶೆಯ ನಡುವೆ ಎಲ್ಲರೂ ಹಂಚಿ ತಿಂದಿದ್ದಾಯ್ತು.

ಮುಂದಿನ ಪಯಣ ಶ್ರೀವರ್ಧನ ಬೀಚಿಗೆ. ಬೆಳಗ್ಗೆ ಹರಿಹರೇಶ್ವರ ಬಿಟ್ಟು ಮಧ್ಯಾನ್ಹದ ಹೊತ್ತಿಗೆ ಶ್ರೀವರ್ಧನ ತಲುಪಿದೆವು. ಅಷ್ಟು ಹೊತ್ತಿಗೆ ಹೊಟ್ಟೆ ಚುರ್ ಎನ್ನಿಸಿತ್ತು.  ಅಲ್ಲೇ ಇದ್ದ ಖಾನಾವಳಿಗೆ ಹೋದರೆ ಪಂಕ್ತಿಗಳಲ್ಲಿ ಊಟ ನಡೆಯುತ್ತಿತ್ತು. ವಿಚಾರಿಸಿದಾಗ 'ನುಸ್ತ್ ಅಮ್ಟಿ ಭಾತ್ ಮಿಲೇಗ' ಅಂತ ಮರಾಠಿ ಮಿಶ್ರಿತ ಭಾಷೇಲಿ ಹೇಳಿದ್ರು. ಸರಿ ಆಯ್ತು ಏನಾದ್ರೂ ಹೊಟ್ಟೆಗೆ ಬಿದ್ರೆ ಸರಿ ಅಂತ ಎಲ್ಲರೂ ಸಗಣಿ ಸಾರಿಸಿದ ನೆಲದ ಮೇಲೆ ಪಂಕ್ತಿಯಲ್ಲಿ ಊಟಕ್ಕೆ ಕೂತೆವು. ತಿಳೀ ಸಾರು ಅನ್ನ ಬಿಸಿ ಬಿಸಿಯಾಗಿ ಎಲೆ ಮೇಲೆ ಬಿದ್ದಾಗ ನಮಗೆಲ್ಲರಿಗೂ ಸ್ವರ್ಗಕ್ಕೆ ಮೂರೇ ಗೇಣು. ಬೆಳಗಿನ ಕಹಿ ಪ್ರಸಂಗವನ್ನೂ ಮರೆತು ಊಟ ಸವಿದೆವು. ನಾವಿನ್ನೂ ಮೊದಲನೆಯ ಬಡಿಸುವಿಕೆಯನ್ನು ಮುಗಿಸುತ್ತಿದ್ದಾಗಲೇ ಎರಡನೆಯ ಸುತ್ತು ಅನ್ನ ಸಾರು ಬಂತು. ಹಸಿವಿಗೆ ಎರಡನೆಯ ಸುತ್ತೂ ಮುಗಿಯಿತು. ಮತ್ತೆ ಮೂರು ನಾಲ್ಕನೆಯ ಸುತ್ತೂ ಅನ್ನ ಸಾರು ಬಂದಾಗ ನಮಗೆ ಗಾಭರಿಯಾಯಿತು. ಇದು ಸಾಕು, ಇನ್ನು ಮಜ್ಜಿಗೆ ಹಾಕಿ ಎಂದೆವು. ಅದಕ್ಕೆ ಅವರು ನಾವು ಮೊದಲೇ ಹೇಳಿದ್ವೆವಲ್ಲಾ ಬರೀ ಅನ್ನ ಸಾರು ಅಂತ ಮಜ್ಜಿಗೆ ಇಲ್ಲ ಅಂದರು. ನಾವು ಮಜ್ಜಿಗೆಗಾಗಿ ಇಟ್ಟುಕೊಂಡಿದ್ದ ಅನ್ನವನ್ನು ಸಾರಿನೊಂದಿಗೇ ತಿಂದು ಏಳಬೇಕಾಯ್ತು. ಮಧ್ಯಾನ್ಹದಿಂದ ತುಂಬಾ ಜನರು ಊಟ ಮಾಡಿದ್ದರಿಂದಲೋ, ಸುಮಾರು ಪಂಕ್ತಿಗಳಾಗಿದ್ದರಿಂದಲೋ ಅಥವಾ ಮಜ್ಜಿಗೆ ಬಡಿಸುವ ಪದ್ಧತಿ ಇಲ್ಲವೆಂದೋ ಅಂತೂ ನಾವು ಬೇಸ್ತು ಬೀಳುವಂತಾಯಿತು. ಅದನ್ನು ನೆನೆದರೆ ಇವತ್ತಿಗೂ ನಗು ಬರುತ್ತದೆ. ಊಟ ಮುಗಿಸುವ ಹೊತ್ತಿಗೇ ಸಂಜೆಯಾದ್ರಿಂದ ಬೀಚ್ ಕಡೆಗೆ ಹೊರಟೆವು. ಬೀಚಿನಲ್ಲಿ ಕಾಲಿಡುತ್ತಲೇ , ಕಣ್ಣಿಗೆ ಸಣ್ಣ ಹುಳಗಳು ಮರಳಿನಲ್ಲಿರುವುದು ಕಂಡು ಬಂತು. ಇಷ್ಟು ಪಿತ ಪಿತ ಓಡಾಡುತ್ತಿದ್ದುವೆಂದರೆ ನಮಗೆ ಮುಂದೆ ಹೆಜ್ಜೆಯಿಡಲೂ ಅಸಹ್ಯವಾಗುತ್ತಿತ್ತು. ಬೇಗ ಬೀಚಿನಿಂದ ಹೊರಬಂದು ಬಸ್ ಹತ್ತಿದೆವು.

ಒದುಗಾ, ಸ್ಥಳ ಪುರಾಣವಾಗಲೀ, ಅದರ ವಿವರಗಳಾಗಲಿ ನಾನು ಹೆಚ್ಚು ಬರೆಯುತ್ತಿಲ್ಲ, ಏಕೆಂದರೆ ನೀವು ಗೂಗಲ್ ಅಥವಾ ಯೂ ಟ್ಯೂಬ್ನಲ್ಲಿ ನೋಡಬಹುದು. ನಾನು ಇಲ್ಲಿ ಮುಖ್ಯವಾಗಿ ನನ್ನ ಪ್ರವಾಸದ ಅನುಭವವನ್ನು ಮಾತ್ರ ಕಟ್ಟಿಕೊಡುತ್ತಿದ್ದೇನೆ. ಹೊರಗಡೆ ಹೋದರೆ, ಮನುಷ್ಯನ ವರ್ತನೆ, ಎದುರಾಗುವ ವಿಚಿತ್ರ ಸನ್ನಿವೇಶಗಳನ್ನು ಮಾತ್ರ ನನ್ನ ಮಿತಿಯಲ್ಲಿ ಕೊಡಲು ಪ್ರಯತ್ನಿಸಿದ್ದೇನೆ.

## Obituary



We regret to inform you that Smt. Neela Suresh Khasnis wife of our respected member Mr. Suresh Khasnis passed away peacefully on 22nd September 2024.

The Mysore Assocaiton extends heartfelt condolence to Mr. Khasnis and his family during this difficult time.

May the departed Soul Rest in Peace.

# ಮೂವತ್ತಾರು ಇಪ್ಪತ್ತ್ನಾಲ್ಕು ಮೂವತ್ತಾರು



(ಉಮಾ ರಾವ್ ಕಥೆಗಳು) ✍ **ಉಮಾ ರಾವ್**

ಕಳೆದ ಸಂಚಿಕೆಯಿಂದ .....

ನೋಡಿ ಮಿಸೆಸ್ ಮೆನನ್, ಇದು ರೆಡಿ ಆದ ತಕ್ಷಣ ಫೋನ್ ಮಾಡ್ತೀನಿ. ಬನ್ನಿ... " ಎಂದು ನಗುತ್ತಾ ಚೆಕ್ ತೆಗೆದುಕೊಂಡರು ಡಾ.ತಲ್‌ವಾಲ್‌ಕರ್.

ಅಂದು ಸಂಜೆ ಗಂಡ ಮನೆಗೆ ಬಂದೊಡನೆ ಎಲ್ಲಾ ವಿವರಗಳನ್ನು ನಿರ್ಮಲಾ ಅವನಿಗೆ ಒಪ್ಪಿಸಿದಳು. ಆದರೆ ಇಂಪ್ಲಾಂಟ್ ಮನೆಗೆ ತಗೊಂಡು ಹೋಗಿ ಎಂದು ಡಾಕ್ಟರ್ ಹೇಳಿದ ವಿಷಯ ಮಾತ್ರ ಅವನಿಗೆ ಹೇಳಲಿಲ್ಲ. ಗಂಡನೊಡನೆ ಅಷ್ಟು ಮನ ನನ್ನ ಮಾತಾಡುವಗೆ ತಾನಕಿರಿಯಾಒಂದು ವಿಷಯ ಏಕೆ ಮುಚ್ಚಿಡುತ್ತಿದ್ದೇನೆ ಎಂದಿನ ಅನಿವಾಗದೆ

ಹತ್ತು ದಿನದ ನಂತರ ಬಂತು ಡಾ.ತಲ್‌ವಾಲ್‌ಕರ್ ಕ್ಲಿನಿಕ್‌ನಿಂದ ಕರೆ. ನಿರ್ಮಲಾ ಹೊರಡಲು ತಯಾರಾಗುತ್ತಿದ್ದಂತೆ ಸರಳವಾಗಿದ್ದ ತನ್ನ ಬದುಕನ್ನು ಸುಮ್ಮನೆ ಗೋಜಲು ಮಾಡಿಕೊಂಡೆನಲ್ಲಾ ಎನ್ನುವ ದುಗುಡ ಮೂಡಿತು. ಡಾ.ತಲ್‌ವಾಲ್‌ಕರ್ ನಗುಮುಖದಿಂದ ಸ್ವಾಗತಿಸಿದವರೇ, "ಸೋ ಐ ಆ್ಯಮ್ ರೆಡಿ" ಎನ್ನುತ್ತಾ ಕಡುನೀಲಿ ಪೆಟ್ಟಿಗೆಯನ್ನು ಅವಳೆದುರು ಇಟ್ಟರು.

"ನೋಡೋಕಾ" ಎಂದವರೇ ಅದರ ಮುಚ್ಚಳ ತೆಗೆದರು. ಒಡವೆ ಅಂಗಡಿಯಿಂದ ನೆಕ್‌ಲೆಸ್ ತೋರಿಸುವಂತೆ. ಒಂದು ದೃಷ್ಟಿಹರಿಸಿದ ನಿರ್ಮಲಾ, "ಹಾಂ... ಪರವಾಗಿಲ್ಲ" ಎನ್ನುತ್ತಾ ಪರ್ಸ್ ತೆಗೆದು ಅಲ್ಲಿಲ್ಲದ ಕರ್ಚೀಫಿಗಾಗಿ ಹುಡುಕಾಡಿದಳು.

"ನೀವು ಅನುಕೂಲದ ದಿನ ಡಿಸೈಡ್ ಮಾಡಿ ನಂಗೆ ಫೋನ್ ಮಾಡಿ. ಆಮೇಲೆ ಆಪರೇಷನ್ ಮಾಡ್ಬಿಡೋಣ. ಏನೂ ಹೆದಕ್ಕೋಬೇಡಿ. ಇಟ್ ಈಸ್ ವೆರಿ ಮೈನರ್, ಆಮೇಲೆ ತುಂಬಾ ಖುಷಿಯಾಗಿದ್ದೀರಾ!" ಎಂದು ಡಾಕ್ಟರ್ ನಕ್ಕರು.

ನಿರ್ಮಲಾ ಎದ್ದು ತಾನು ತಂದಿದ್ದ ಶಾಪಿಂಗ್ ಚೀಲದಲ್ಲಿ ಆ ಡಬ್ಬ ಹಾಕಿಕೊಂಡು ಡಾಕ್ಟರ್‌ಗೆ ಬೈ ಹೇಳಿ ಅಲ್ಲಿಂದ ಹೊರಟಳು.

ನಿರ್ಮಲಾ ಬಸ್ಸಿನಿಂದಿಳಿದು ತನ್ನ ಬಿಲ್ಡಿಂಗ್‌ನತ್ತ ನಡೆದು ಬರುತ್ತಿರುವಾಗ ಅವಳ ಮನಸ್ಸಿನಲ್ಲಿ ಆತಂಕ ತುಂಬಿತ್ತು. ಸದ್ಯ ಯಾರೂ ಗುರುತಿನವರು ಸಿಗದಿದ್ದರೆ ವಾಸಿ. ಕೈಯಲ್ಲಿದ್ದ ಚೀಲ ಅವಳಲ್ಲಿ ವಿಚಿತ್ರ ಅಳುಕು ತುಂಬಿತ್ತು. ಗೆಳತಿಯರು ಯಾರಾದರೂ ಸಿಕ್ಕರೆ ಏನು ಒಬ್ಬಳೇ ಶಾಪಿಂಗ್, ಏನು ಖರೀದಿಸಿದೆ ಎಂತ ಶುರುವಾಗುವುದು ಖಾತರಿ. ಹಾಗಂದುಕೊಂಡೇ ಬೇಗಬೇಗ ಹೆಜ್ಜೆ ಹಾಕುತ್ತಿದ್ದಾಗ ದೂರದಲ್ಲಿ ಮಿಸೆಸ್ ಸಿಂಗ್ ಬರುತ್ತಿರುವುದು ಕಾಣಿಸಿತು. ನಿರ್ಮಲಾ ಪಕ್ಕದ ಗಲ್ಲಿಗೆ ತಿರುಗಿ, ಕಬ್ಬಿನ ಹಾಲಿನವನ ಸಾಲಿನತ ನಡೆದಳು. ಬೇರೆಡೆ ಮುಖ ತಿರುಗಿಸಿಕೊಂಡು ೨ ಲೋಟ ಕಬ್ಬಿನ ಹಾಲು ಕುಡಿದಳು. ಇಷ್ಟು ಹೊತ್ತಿಗೆ ಮಿಸೆಸ್ ಸಿಂಗ್ ಬಸ್ ಸ್ಟಾಪ್ ತಲುಪಿರುತ್ತೆ ಎಂದು ಖಾತರಿ ಮಾಡಿಕೊಂಡು ಅಲ್ಲಿಂದ ಹೊರಟಳು. ಬಿಲ್ಡಿಂಗ್ ಹತ್ತಿರ ಸಿಕ್ಕ ಪದ್ಮಾ "ಏನು ನಿರ್ಮಲಾ ಶಾಪಿಂಗ್ ಜೋರಾ?" ಎಂದು ಮಾತಿಗೆ ಹವಣಿಸಿದಾಗ, "ಹೂಂ. ಹೇಳ್ತಿನಿ ಆಮೇಲೆ..." ಎಂದವಳೇ ನಿಲ್ಲದೆ ಮನೆಯತ್ತ ಓಡಿದಳು.

ಮನೆಯೊಳಗೆ ಬಂದ ನಿರ್ಮಲಾ ಮೊದಲು ಫ್ಯಾನ್ಸ್ ಕೆಳಗೆ ಕುಳಿತು ಹೆಚ್ಚಿನಿಂದ ತಣ್ಣೀರು ತೆಗೆದು ಕುಡಿದಳು. ಆಗಲೇ ಐದು ಗಂಟೆ, ಗಂಡ, ಮಗ ಇನ್ನು ಅರ್ಧ ಗಂಟೇಲಿ ಮನೆಗೆ ಬರುತ್ತಾರೆ. ಅದಕ್ಕೆ ಮುಂಚೆ ಈ ಡಬ್ಬ ಒಳಗೆ ಸೇರಿಸಬೇಕು. ಮಲ್ಲಗೆ ಆ ಡಬ್ಬ ತೆಗೆದು, ಆ ಇಂಪ್ಲಾಂಟ್ಸ್ ಮೇಲೆ ಬೆರಳಾಡಿಸಿದಳು. ಎಂದು, ಮೆಲಾ ಮುಜುಗರವಾಯಿತು. ಹೂಂ, ಆಪರೇಷನ್ ಆದಮೇಲೆ ಎಲ್ಲಾ ಸರಿಹೋಗುತ್ತೆ ತುಂಬು ಸಮಾಧಾನ ಮಾಡಿಕೊಂಡಳು. ಒಳಗೆ ಹೋಗಿ ತನ್ನ ಸ್ಟೀಲ್ ಕಪಾಟ್ ತೆಗೆದು, ಅದರಲ್ಲಿ ಈ ಡಬ್ಬ ಇಟ್ಟು ಅದು ಯಾರ ಕಣ್ಣಿಗೂ ಬೀಳದಂತೆ ಸುತ್ತಿಟ್ಟು ಸೀರೆಗಳನ್ನು ಅದರ ಮೇಲೆ ಪೇರಿಸಿದಳು. ಮನಸ್ಸಿಗೆ ಕೊಂಚ ಹಾಯೆನಿಸಿತು. ಕಪಾಟು ಮುಚ್ಚಿ ಗಂಡ ಮಗನಿಗೆ ತಿಂಡಿ ತಯಾರಿಸಲು ಅಡಿಗೆಮನೆ ಹೊಕ್ಕಳು.

ಮಾಲಿನಿಯ ಮನೆಗೆ ಬಂದು ಹೋದ ಮೇಲೆ ಒಂದು ವಾರ ನಿರ್ಮಲಾ ಸದ್ದಿರ ಲಿಲ್ಲ. ಮಾಲಿನಿಗೂ ಆ ವಿಷಯ ಸ್ವಲ್ಪ ಹಳೆಯದಾಗಿ ಮನಸ್ಸು ನಿರಾಳವಾಗತೊಡಗಿತ್ತು.

ಆದರೆ, ಅಂದು ಮಧ್ಯಾಹ್ನ ಬಿಲ್ಡಿಂಗ್‌ನಲ್ಲಿ ಆದ ಗಲಭೆ ಎಲ್ಲರ ಶಾಂತಿ ಕದಡಿತು. ಅಂದು ಬೆಳಗ್ಗೆ ನಿರ್ಮಲಾ ಡ್ಯಾನ್ಸ್ ಕ್ಲಾಸಿಗೆ ಹೋಗಿದ್ದಾಗ, ಯಾರೂ ಮನೆಯಲ್ಲಿಲ್ಲದಿದ್ದನ್ನು ಗಮನಿಸಿ, ಕಳ್ಳರು ಬಾಗಿಲೊಡೆದು ನುಗ್ಗಿದ್ದರು. ನಿಧಾನವಾಗಿ ಮನೆಯಲ್ಲಿದ್ದ ಇಲೆಕ್ಟ್ರಾನಿಕ್ಸ್ ಸಾಮಾನುಗಳು, ಒಡವೆ, ಹಣ, ಭಾರಿ ಸೀರೆಗಳು

ಎಲ್ಲಾ ದೋಚಿ ಪರಾರಿಯಾಗಿದ್ದರು. ನಿರ್ಮಲಾ ಮನೆಗೆ ಬಂದಾಗ ತೆರೆದಿದ್ದ ಬಾಗಿಲು ನೋಡಿ ಅವಳಿಗೆ ಎಲ್ಲಾ ತಿಳಿದಿತ್ತು.

ಇದೆಲ್ಲಾ ತಿಳಿದ ಮಾಲಿನಿ ಅಂದು ಸಂಜೆ ನಿರ್ಮಲಾಗೆ ಈ ಬಗ್ಗೆ ಸಂತಾಪ ಸೂಚಿಸಲು ಅವರ ಮನೆಗೆ ಹೋದಳು.

[

ನಿರ್ಮಲಾ ಗಂಡ, ಮಗ, ಹಾಲಿನಲ್ಲಿ ಸೋಫಾದ ಮೇಲೆ ಕೂತಿದ್ದರು. ಬಂದವರಿಗೆಲ್ಲಾ ಕಳುವಿನ ಕತೆ ಹೇಳಿ, ಅವರ ಸಾಂತ್ವನ ಕೇಳಿ ಅವರು ದಣಿದಿದ್ದಂತೆ ಕಂಡಿತು. ಆ ದಣಿವಿನ ಮರೆಯಲ್ಲಿ ನಿರ್ಮಲಾ ಮುಖದ ಮೇಲೆ ಮಾತ್ರ ವಿಚಿತ್ರ ಹಗುರತೆ ಕಂಡಂತಾಯಿತು. ಅವಳ ಗಂಡ, ಮಾಲಿನಿ ಕಳುವಾದ ಚಿನ್ನ, ಸೀರೆಗಳು, ಕ್ಯಾಮೆರಾ, ಇತ್ಯಾದಿಗಳ ಪಟ್ಟಿ ಪೊಲೀಸರಿಗೆ ಕೊಟ್ಟಿದ್ದರು. ಪೊಲೀಸಿನವರು ಎಲ್ಲಾ ನೋಡಿಕೊಂಡು ಹೋಗಿದ್ದಾರೆ. ಏನಾಗುತ್ತೋ ನೋಡಬೇಕು ಎಂದರು.
ಮಾಲಿನಿ ಮನೆಗೆ ಹೊರಡಲು ಎದ್ದಾಗ, ನಿರ್ಮಲಾ "ಮಾಲಿನಿ ಒಂದ್ನಿಮಿಷ" ಪಾತ್ರವೇ ಅವಳನ್ನು ಅಡಿಗೆ ಮನೆಗೆ ಎಳೆದುಕೊಂಡು ಹೋದಳು. ಕೆಳದನಿಯಲ್ಲಿ ಮಾತಾಡಿದಳು.


ನೋಡು ಮಾಲಿನಿ, ತುಂಬಾ ಕಳಕೊಂಡ್ರಿ ನಿಜ. ಬೇಜಾರಾಗುತ್ತೆ. ನಮ್ಮ ಅದೃಷ್ಟ ಚೆನ್ನಾಗಿದ್ದರೆ ಕಳ್ಳ ಸಿಕ್ಕಬಹುದು. ಆದ್ರೆ ಒಂದು ವಿಷಯ... ಅವತ್ತು ತಂದಿದ್ದೆನಲ್ಲಾ ಹಾನು, ಅದರ ಬಾಕ್ಸ್... ಅದನ್ನು ಯಾರಿಗೂ ಕಾಣಬಾರದೂಂತ ನನ್ನ ಭರತನಾಟ್ಯದ ಕೇಪಿನಲ್ಲಿ ಸುತ್ತಿ ಕಪಾಟಿನಲ್ಲಿ ಸೀರೆಗಳ ಕೆಳಗಿಟ್ಟಿದ್ದೆ. ಸದ್ಯ ಕಳ್ಳ ಅದನ್ನು ಎತ್ತಿಕೊಂಡು ಬಾಯಿಗೆ ಸೆರಗು ಮುಚ್ಚಿಕೊಂಡಳು. "ಬಚಾವಾದೆ" ಎನ್ನುತ್ತಾ ಮಾಲಿನಿಯ ಕೈ ಅರುಮಿದಳು.

ಮಾರನೆಯ ದಿನ ಮಧ್ಯಾಹ್ನ ನಿರ್ಮಲಾ ಮಾಲಿನಿಯ ಮನೆಗೆ ಬಂದಾಗ ಅವಳ ಮುಖ ತುಂಬಾ ಪೆಚ್ಚಾಗಿತ್ತು.

"ಏನಾಯ್ತು..." ಎಂದಳು ಮಾಲಿನಿ. "ಕಳ್ಳ ಸಿಕ್ಕಿಬಿದ್ದ ಮಾಲು ಸಮೇತ"

"ಹೌದಾ? ಕಂಗ್ರಾಟ್ಸ್! ನಿನ್ನ ಅದೃಷ್ಟ ಚೆನ್ನಾಗಿತ್ತು"
'ಹೌದು. ಮಾಲಿನಿ ಈಗ ತಾನೇ ಪೊಲೀಸ್ ಸ್ಟೇಷನ್ನಿಂದ ಫೋನ್ ಬಂತು. ಹೋಗಿದ್ವಿ ಐಡೆಂಟಿಫೈ ಮಾಡೋಕೆ. ಸಿಕ್ಕ ಸಾಮಾನೆಲ್ಲ ಸಾಲಾಗಿ ಜೋಡಿಸಿಟ್ಟಿದ್ದರು. ವೆಲ್ಲದರ ನಡುವೆ ತೆರೆದಿದ್ದ “ಆ ಬಾಕ್ಸ್!” ನಂಗೆ ಅಲ್ಲಿಂದ ಓಡಿಹೋಗೋಣ ಅನ್ನಿಸ್ತು. ಪಾಪ, ನನ್ನ ಗಂಡಂಗೆ ಹೇಗಾಗಿರಬೇಕು..." ಎಂದು ನಿರ್ಮಲಾ ಹೇಳುತ್ತಿ ದ್ದಂತೆಯೇ ಪೆಚ್ಚಾಗಿದ್ದ ಅವಳ ಮುಖ ಅರಳಿತು. ಎಂದಿನ ಅವಳ ನಗು ಮುಗ್ಧವಾಗಿ ಹರಿದು ಬಂತು. ಮಾಲಿನಿಯ ನಗುವೂ ಅದರೊಡನೆ ಬೆರೆತಂತೆ ಅವರಿಬ್ಬರ ಕಣ್ಣಿನಲ್ಲಿ ನೀರು ಹರಿಯತೊಡಗಿತು.

---



**ನೇಸರು ಓದುವರಿಗೆ ದೀಪಾವಳಿಯ ಶುಭಾಶಯಗಳು**

# Golden thrones & grand processions – The Mysore Dasara Experience

Shabari Shankar

Mysore was always a mystery to me. Sure, my dad insists he whisked me away to its grand palaces when I was but a mere infant of six months. Dad always loved to remind me, “You’ve seen Mysore palace before!” But let’s be real, at that age, I was more interested in my toes than architectural wonders. Living in Bangalore, it’s almost embarrassing to admit that Mysore, just a stone’s throw away, remained an unchecked box on my adult travel list.

Then came Dussehra. It was my first time away from home during this beloved festival. As a travel writer, I’ve been fortunate to experience Dussehra festivities from the northern plains to the southern coasts of India. Everywhere, the triumph of good over evil is celebrated with fervor, rituals, and of course, delectable food. It’s my absolute favourite festival. This year, however, I was tethered to Bangalore due to work. But when Dussehra dawned, an idea sparked: Why not visit Mysore? I’d always heard tales of its legendary celebrations.

In Mysore, or as locals fondly call it, Dasara, is not just another festival. While the rest of India revels in the nine nights of Navratri, Mysore transforms into a 10-day spectacle, climaxing on Vijayadashmi or Dasara. In the spirit of being adventurous, I booked a Savaari from Bangalore to Mysore stepped out and decided to explore the city like a local. From its rich history and enduring legacy to the event itinerary, here’s a recount of my journey through this magnificent Mysore Dussehra celebration, along with essential insights for the curious traveller.

**Tracing the evolution of Mysore’s Dasara celebration**: Upon setting foot in Mysore, I was immediately captivated by its festive magnificence. The Mysore Dasara celebrations have a rich history spanning over 500 years, even though its present-day manifestation has transformed considerably from its inception. My chauffeur, Ganesh, shared stories that encapsulated the essence of Mysore Dasara’s history, as the locals buzzed with excitement for the upcoming celebrations. In a city that radiates opulence, here’s a glimpse into its storied past.

**Legends and myths behind Mysore’s Dasara:** Dussehra, celebrated as Vijayadashami in Mysore, is deeply rooted in the city’s mythology. The festival commemorates the victory of Goddess Chamundeshwari over the demon Mahishasura. This event is so integral to the city’s identity that its very name, Mysore, is derived from “Mahishasura.” The tale symbolizes the triumph of good over evil, and celebrations in Mysore during Dussehra are a testament to this age-old narrative.

**Celebrations in the time of Vijayanagaraa:** The Mysore Dasara festival, while spiritual in its inception, began to take on a more cultural and artistic dimension during the Vijayanagara era. From 1136 to 1565 AD, the Vijayanagara kings, recognizing the importance of art and culture, provided royal patronage to the festival. This support transformed Dasara from a purely religious event to a grand celebration of the kingdom’s art, culture, and heritage.

**The Wadiyar’s era:** The Wadiyars of Mysore, once subjects of the Vijayanagara Empire, declared their independence in the late 16th century. Despite this political shift, they continued to honour the Dasara traditions, even elevating their royal significance. The first grand celebration under their rule was in 1610 in Srirangapatna. Their commitment to the festival was so profound that it persisted even during the reigns of rulers like Hyder Ali, who was not originally from the Wadiyar lineage.





I. **WORD PUZZLES:**


1. USING THE FOUR LETTERS BELOW ONLY, CREATE A SEVEN LETTER WORD. (UMNI)
2. A RICH MAN NEEDS SEVEN LETTER WORD WHICH IS WITH THE POOR?
3. WHAT BET CAN NEVER BE WON?
4. COMPLETE THE FIVE WORDS BELOW IN SUCH A WAY THAT THE TWO LETTERS THAT END THE FIRST WORD ALSO START THE SECOND WORD, AND THE TWO LETTERS THAT END THE SECOND WORD ALS START THE THIRD WORD ETC. THE SAME TWO LETTERS THAT END THE FIFTH WORD ALSO START TH FIRST WORD, TO COMPLETE THE CYCLE
   (** IV **, ** OT **, ** IC **, ** NG **, ** RA **)
5. IN THE BELOW PUZZLE, THERE ARE 2 DOUBLE BLANKS. FILL IN THE BLANKS WITH THE SAME PAIR OF LETTERS TO COMPLETE AN ENGLISH WORD. FOR EXAMPLE, USE THE LETTER-PAIR AC IN B__KP__K TO MAKE THE WORD BACKPACK
   _ _ S _ _ DE

II. **LOGICAL PUZZLES:**

A)




B)





III. **WHAT DOES THE PUZZLES SAY**:

I)




II)




## PUZZLES & TEASERS ANSWERS

I.**WORD PUZZLES**: 1. ONE, 2. 10, 3. WHAT, 4. NOT, 5. OFFICE, 6. ODD NUMBERS (ONE YEAR, 1ST & 3RD WEEK,1,3,5 &7 DAY, 1.3.5.7.9.11 HOURS.), 7. PLAYING CHESS WITH LORRAINE.

II. **LOGICAL PUZZLES**: 1). 45, 2). 22 / 2 = 11 -2 = 9

III. A). D - Explanation : The number of black dots in each grid increases by 1 each time, starting with the top left grid and working to the right, top row then bottom row.

B). Q - Explanation : Adding the three numbers in each square together gives the numerical value of the letter at the centre of each square.

***Compiled by: Mr Ananth Banwasi***

# Dasara Doll Festival – Significance and History

Navaratri is a major festival of the Hindus that is celebrated in various styles all over the country every year. Different states of the country have different names and customs for celebrating this festival. In the southern part of India, the festival of Navaratri is celebrated with a very interesting and unique tradition called Bombe Habba or Golu or Kolu (Kannada) or Bommala Koluvu (Telugu) or Bommai Kolu (Tamil) or simply Dasara dolls. This tradition involves a toy festival that is celebrated by families across Karnataka and Andhra Pradesh.

Dasara, the day when Goddess Durga won the battle against the demons or asuras after fighting for 9 days. In Karnataka the festival is also known as Dasara Doll Festival.

**The Dasara Doll Festival of Karnataka:** The Dasara doll festival is celebrated in Karnataka through an exhibition of various dolls and figurines arranged as per custom. The dolls are arranged and exhibited on a stepped platform having an odd number of steps or tiers (usually 7, 9 or 11) and usually covered with a white or light color cloth. Many households use nine steps for the exhibition of dolls to signify the nine nights of Navaratri. The dolls are ritually worshipped during the celebrations.

The main dolls of the festival are a pair depicting a husband and a wife. They are referred to as Pattada Gombe or Pattath bommaikal. This set of main dolls is handed over to a daughter by her parents during her marriage ceremony. They are presented to the new bride to start her own family and continue with the tradition of the festival.



The Pattada Gombe pair is a set of traditional dolls made from wood. These dolls are dressed colorfully using papers or silk textiles. This main pair of dolls is always dressed in the traditional style. Tradition demands that the first step of the platform be usually reserved for miniature idols or dolls depicting gods and goddesses. Generally, the idols of Rama, Lakshmana, Seeta, Krishna, Radha, Shiva, Vishnu, Durga, Lakshmi, Saraswati, etc. are used in this festival. It is also customary to have a few wooden dolls in the collection.

**Dasara Doll Steps -The Arrangement of Dolls on the Tiers:** Every home selects an auspicious time to begin the doll festival. The dolls are arranged as per a specific order on the tiers or steps. The hierarchy starts from the Gods being placed at the top tiers and ends with mortals of earth placed at the lower tiers of the platform.

**Steps 1 to 3**: The first three steps are dedicated to figurines or idols of Gods and Goddesses. Different idols of various gods and goddesses are placed on these steps.

**Steps 4 to 6**: The next three steps are used to arrange dolls depicting demi-gods, great saints or kings and queens. Due importance is given to the Mysore kings during this festival and their miniature forms are generally seen placed on these steps.

Step 7: This step is devoted to showcasing of Hindu festivals, celebrations and occasions.

Step 8: This step is decorated with scenes from everyday life, such as a park, a shop, a vegetable vendor, etc.



Step 9: The last step usually depicts the evolution of mankind or living things.

There is no hard and fast rule to arrange the dolls. Every household generally increases or decreases the number of stairs according to the rows or tiers needed for displaying the various dolls available to them.

The History Associated with the Doll Festival: Legend has it that Goddess Durga waged war against the demon Mahishasura. In order to help her all the Gods and Goddesses gave her all their powers. As the Gods and Goddesses became powerless, they stood as statues. Durga triumphed over Mahishasura on the 10th day of the war, which is celebrated as Dashara. To pay respect to the self-sacrifice of those dieties the doll festival is observed by worshipping the Gods and Goddesses in the form of dolls. This custom is believed to be prevalent since the existence of the Vijayanagar kingdom.

Customs Followed in the Doll Festival: Most households follow a theme for the arrangement of dolls. Some households follow a simple and traditional theme while some follow elaborate and extravagant ways of presenting their dolls. People use their creativity to showcase their collection in a unique and attractive manner. Some people depict stories from Ramayana and Mahabharata on the rows of the platform. These days, people also exhibit the dolls with modern themes like saving environment or reducing pollution, etc.



Every year people add a new set of dolls to their collection. As such, the collection increases every year in each household. The dolls are passed on from one generation to the next. As such, some families have dolls that are more than 100 years old.

During the 10 days period people invite and visit friends and family and enjoy the unique exhibition of dolls in each family. Everyday an offering is presented to the dolls which are distributed among the family members, neighbors and guests as Prasad.

Significance of the Doll Festival celebration:

Karnataka follows the doll festival in a way to be rooted to the traditions and introduce the new generation to the rich culture and mythology of the land. It is also a way to seek divine blessings and entertain the children during the Dasara festival.

The craft of traditional doll making is on diminishing by the day. Mysore becomes a land of dolls during the Dasara festival. The festival encourages keeping the craft of wooden and clay doll-making alive and allows the grown-ups to become children for a few days each year.

# ಮೈಸೂರು ಅಸೋಸಿಯೇಷನ್, ಮುಂಬೈ

## ನವರಾತ್ರಿಯ ಕಾರ್ಯಕ್ರಮಗಳು

| | | |
|---|---|---|
| ಗುರುವಾರ<br>ಅಕ್ಟೋಬರ್ 3, 2024 | ಬೆಳಿಗ್ಗೆ 11.00<br>ಮಧ್ಯಾಹ್ನ<br>ಸಂಜೆ 6.30 | ಕಳಶ ಪ್ರತಿಷ್ಠಾಪನೆ, ಪೂಜೆ, ಲಲಿತ ಸಹಸ್ರನಾಮ ಮತ್ತು ಪ್ರಸಾದ ವಿನಿಯೋಗ<br>NKES KG ಮಕ್ಕಳಿಂದ ಲಲಿತ ಕಾರ್ಯಕ್ರಮ<br>ಪೂಜೆ, ಕುಂಕುಮಾರ್ಚನೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಶುಕ್ರವಾರ<br>ಅಕ್ಟೋಬರ್ 4, 2024 | ಬೆಳಿಗ್ಗೆ 11.00<br>ಸಂಜೆ 6.30 | ಪೂಜೆ, ಲಲಿತ ಸಹಸ್ರನಾಮ, ಮಂಗಳಾರತಿ, NKES KG ಮಕ್ಕಳಿಂದ ಲಲಿತ ಕಾರ್ಯಕ್ರಮ ಮತ್ತು ಪ್ರಸಾದ ವಿನಿಯೋಗ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಭಜನೆ, ಮಂಗಳಾರತಿ , ಮತ್ತು ಪ್ರಸಾದ ವಿನಿಯೋಗ |
| ಶನಿವಾರ<br>ಅಕ್ಟೋಬರ್ 5, 2024 | ಬೆಳಿಗ್ಗೆ 11.00<br>ಸಂಜೆ 6.30 | ಪೂಜೆ, ಲಲಿತ ಸಹಸ್ರನಾಮ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಭಜನೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಭಾನುವಾರ<br>ಅಕ್ಟೋಬರ್ 6, 2024 | ಬೆಳಿಗ್ಗೆ 11.00<br>ಸಂಜೆ 5.30 | ಪೂಜೆ, ಲಲಿತ ಸಹಸ್ರನಾಮ, ಮಂಗಳಾರತಿ, ಮತ್ತು ಪ್ರಸಾದ ವಿನಿಯೋಗ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಭಜನೆ, ಅರಿಶಿನ ಕುಂಕುಮ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಸೋಮವಾರ<br>ಅಕ್ಟೋಬರ್ 7, 2024 | ಬೆಳಿಗ್ಗೆ 11.00<br>ಸಂಜೆ 6.30 | ಪೂಜೆ, ಲಲಿತ ಸಹಸ್ರನಾಮ, ಮಂಗಳಾರತಿ, NKES KG ಮಕ್ಕಳಿಂದ ಲಲಿತ ಕಾರ್ಯಕ್ರಮ ಮತ್ತು ಪ್ರಸಾದ ವಿನಿಯೋಗ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಮಂಗಳವಾರ<br>ಅಕ್ಟೋಬರ್ 8, 2024 | ಬೆಳಿಗ್ಗೆ 11.00<br>ಸಂಜೆ 6.30 | ಪೂಜೆ, ಲಲಿತ ಸಹಸ್ರನಾಮ, ಮಂಗಳಾರತಿ, NKES KG ಮಕ್ಕಳಿಂದ ಲಲಿತ ಕಾರ್ಯಕ್ರಮ ಮತ್ತು ಪ್ರಸಾದ ವಿನಿಯೋಗ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಬುಧವಾರ<br>ಅಕ್ಟೋಬರ್ 9, 2024 | ಬೆಳಿಗ್ಗೆ 11.00<br>ಮಧ್ಯಾಹ್ನ<br>ಸಂಜೆ 5.30 | ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಮಂಗಳಾರತಿ, ಮತ್ತು ಪ್ರಸಾದ ವಿನಿಯೋಗ<br>NKES KG ಮಕ್ಕಳಿಂದ ಲಲಿತ ಕಾರ್ಯಕ್ರಮ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಗುರುವಾರ<br>ಅಕ್ಟೋಬರ್ 10, 2024 | ಬೆಳಿಗ್ಗೆ 11.00<br>ಸಂಜೆ 6.30 | ಪೂಜೆ, ಲಲಿತ ಸಹಸ್ರನಾಮ, ಮಂಗಳಾರತಿ, ಮತ್ತು ಪ್ರಸಾದ ವಿನಿಯೋಗ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಮಂಗಳಾರತಿ, ಮತ್ತು ಪ್ರಸಾದ ವಿನಿಯೋಗ |
| ಶುಕ್ರವಾರ<br>ಅಕ್ಟೋಬರ್ 11, 2024 | ಬೆಳಿಗ್ಗೆ 11.00<br>ಮಧ್ಯಾಹ್ನ<br>ಸಂಜೆ 5.30 | ಪೂಜೆ, ಲಲಿತ ಸಹಸ್ರನಾಮ, ಮಂಗಳಾರತಿ, ಮತ್ತು ಪ್ರಸಾದ ವಿನಿಯೋಗ<br>NKES KG ಮಕ್ಕಳಿಂದ ಲಲಿತ ಕಾರ್ಯಕ್ರಮ<br>ಪೂಜೆ, ಲಲಿತ ಸಹಸ್ರನಾಮ, ಕುಂಕುಮಾರ್ಚನೆ, ಮಂಗಳಾರತಿ ದಾಂಡಿಯಾ ಮತ್ತು ಪ್ರಸಾದ ವಿನಿಯೋಗ |
| ಶನಿವಾರ<br>ಅಕ್ಟೋಬರ್ 12, 2024 | ಸಂಜೆ 5.30 | ಶಮೀ ಪೂಜೆ, ಮಂಗಳಾರತಿ, ವಿಸರ್ಜನೆ ಮತ್ತು ಪ್ರಸಾದ ವಿನಿಯೋಗ |

ಸ್ಥಳ: ಮೈಸೂರು ಅಸೋಸಿಯೇಷನ್, ಮುಂಬೈ
393, ಭಾವು ದಾಜಿ ರಸ್ತೆ
ಮಾಟುಂಗ, ಮುಂಬೈ - 4000019

ನೀವೂ ಬನ್ನಿ, ನಿಮ್ಮವರನ್ನು ಕರೆತನ್ನಿ

**ಮೈಸೂರು ದಸರಾ ಆಚರಣೆಯ ರೀತಿಯಲ್ಲಿ, ಮೈಸೂರು ಅಸೋಸಿಯೇಷನ್ನಿನಲ್ಲಿ, ಗೊಂಬೆಗಳನ್ನು ಕೂರಿಸಲಾಗಿದೆ. ಆಸಕ್ತರು ಬಂದು ನೋಡಿ ಆನಂದಿಸಿ.**

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077